# ಕರ್ಣಾಟಕ ಕಾವ್ಯಮಂಜರಿ.

# ಕರ್ಣಾಟಕ ಶಬ್ದಸಾರಂ

[೧೮]


ಎಸ್. ಜಿ. ನರಸಿಂಹಾಚಾರ್

ಲೈಬ್ರೇರಿಯನ್, ಗೌರ್ನಮೆಂಟು ಓರಿಯಂಟಲ್ ಲೈಬ್ರೆರಿ, ಮೈಸೂರು,

ಮ. ಅ. ರಾಮಾನುಜಯ್ಯಂಗಾರ್,

ಅಸಿಸ್ಟೆಂಟ್ ಮಾಸ್ಟರ ವೆಸ್ಲಿಯನ್ ಹೈಸ್ಕೂಲ್ ಮೈಸೂರು


ಇವರಿಂದ ಪರಿಷ್ಕರಿಸಲ್ಪಟ್ಟು


ಕರ್ಣಾಟಕ ಕಾವ್ಯಮಂಜರಿ ಪ್ರೊಪ್ರೈಟರುಗಳಿಗಾಗಿ,

ಮೈಸೂರು

ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.

೧೮೯೭.

[ಕ್ರಯ ೪ ಆಣೆ.]

Registered according to Act XXV, 1867.

(*All rights reserved*)

ಈ ಪುಸ್ತಕವು ಮೈಸೂರಲ್ಲಿರುವ ಕರ್ಣಾಟಕಕಾವ್ಯಮಂಜರಿ ಆಫೀಸ್ ಮ್ಯಾನೇಜಿಂಗ್ ಪ್ರೊಪ್ರೈಟರ್ ಮ. ಕುಮಾರಸ್ವಾಮಿ ತಿರುಮಲಾಚಾರ್ಯರಲ್ಲಿ ದೊರೆಯುತ್ತದೆ.

# ಪೀಠಿಕೆ.

ಇದು ಒಂದು ವಚನರೂಪವಾದ ನಿಘಂಟು. ಇದು ಛಂದೋಬದ್ಧವಾಗಿಯೂ ಇದೆಯೆಂದೂ, ಬಹುಶಃ ೧೮ ನೆಯ ಶತಮಾನದಲ್ಲಿ ವಿರಚಿತವಾಗಿರಬಹುದೆಂದೂ ಮೊ॥ ಕಿಟಲ್ ಸಾಹೇಬರು ಹೇಳುತ್ತಾರೆ. ಇದರ ಆಧಾರದಿಂದಲೇ ತೋಂಟದಾರ್ಯನ ಕರ್ನಾಟಕಶಬ್ದಮಂಜರಿ ಯೆಂಬ ನಿಘಂಟು ಹುಟ್ಟಿದಹಾಗೆ ತೋರುತ್ತದೆ.

ಈ ನಿಘಂಟುವಿನಲ್ಲಿ ೭೭೬ ಖಂಡಗಳಿವೆ; ೧೮೧೬ ಪದಗಳಿಗೆ ಅರ್ಥ ಕೊಟ್ಟಿದೆ. ಗ್ರಂಥಕರ್ತನಾರೋ ತಿಳಿಯದು.

ಇದರ ಪ್ರತಿಯೊಂದನ್ನು ಮೊ॥ ರೈಸ ಸಾಹೇಬರು ದಯವಿಟ್ಟು ಕಳುಹಿಸಿಕೊಟ್ಟರು. ಮೊ॥ ಕಿಟಲ್ ಸಾಹೇಬರವರು, ತಮ್ಮ ಕನ್ನಡ ಡಿಕ್ಷನರಿಯಲ್ಲಿ ಈ ಗ್ರಂಥವನ್ನು ಅಲ್ಲಲ್ಲಿ ಅನುವಾದಮಾಡಿದಾರೆ. ಇವುಗಳ ಸಹಾಯ್ಯದಿಂದ ಈ ಗ್ರಂಥವನ್ನು ಮುದ್ರಿಸಿದೇವೆ.

ಪ್ರತಿಯನ್ನು ಕಳುಹಿಸಿಕೊಟ್ಟದುದಕ್ಕಾಗಿ ಮೊ॥ ರೈಸ ಸಾಹೇಬರಿಗೆ ಕೃತಜ್ಞರಾಗಿದೇವೆ.

# ಕರ್ಣಾಟಕ ಶಬ್ದಸಾರಂ

೧. ಎಣ್ಮಯ್ಯಂ, ಗೊಂದೆವೆಱಿಯಿಗೆಯಂ, ಎಳದೇರಂ, ಪಿರಿತಿನಿಯಾಣ್ಮಂ, ಸೊಡಬಲಿವನೆಯಂ, ಎಲರುಣಿವೆದೆಯಂ, ಅಱುವೊಗನಯ್ಯಂ, ಪೊಂಬೆಟ್ಟವಿಲ್ಲಂ, ಇಂಗಳಗಣ್ಣಂ, ಈಸರಂ, ಪೆಂದಲೆವಜ್ಜಂ, ಬೂಂಬೊಕ್ಕದಲೆಯಂ, ಸಬ್ಬಂ, ಬಗ್ಗದೊವಲುಡೆಯಂ, ಬೂನ್ನವಿರಂ, ದಪ್ಪಕವಗೆಯಂ, ಅವ*ದುರ್ಗವೆಣ್ಣೊಪಂ, ಕಂದುಗೊರಲಂ, ಮಾದೇವಂ, ಬೂಂಬೊಱಲುರಿಕಂ, ದೇಸಿಗಂ, ಗಂದರಗಿವಿಯಂ, ಬೆಳ್ಳಡಿ, ಮಿಗಗಯ್ಯಂ, ಕಣ್ಣಡಿಗಂ, ತಿಸುಳ, ಪೆಣ್ದೊಡೆಯಂ, ಈಸಂ, ಗೊರವಂ, ಚಳವೆಟ್ಟಳಿಯಂ, ಸಸಿದಲೆಯಂ, ಗನೆಪಂ, ಐವೊಗಂ— ಈ ೩೩ ಈಶ್ವರಂಗೆ ಪೆಸರ.

೨. ಮೂವೊನೆಗೈದುವೆಂದುಂ, ತಿಸುಳವೆಂದುಂ, ಶಿವಂ ಪಿಡಿದ ತ್ರಿಶೂಲಂ.

೩. ಮಾಕಾಳಿ, ಮಾದೇವಿ, ಸಬ್ಬಾಣಿ, ಐಕಿಲ್ವೆಟ್ಟಣುಗಿ, ಸಿಂಗದೇರಳ್— ಈ ೫ ಪಾರ್ವತಿಯ ಪೆಸರ

೪. ಕರಿವೊಗಂ, ಇಲಿದೇರಂ, ಎಡಗೋಡಿ, ಬಿಜ್ಜೆವಳಂ, ಎಲರುಣಿವಸಿಱಂ, $ಬಿಂಕಣಗಿವಿಯಂ, ತಂದೆಯತಂದೆಯಿಲ್ಲದವಂ— ಈ ೭ ವಿನಾಯಕಂಗೆ ಪೆಸರ್.

೫. ನವಿಲ್ದೇರಂ, ಮುಯ್ಯ್ವಮೊಗಂ, ( ಆಱುವೊಗಂ, ) ಮರಗೊಱಮಗಂ—ಈ ೪ ಕಾರ್ತಿಕೇಯಂಗೆ ಪೆಸರ್.

೬. ಜನ್ನಪಗೆಯಂ, ಎಂಟಡಿವರಿಜಂ, ಬೀರಂ, ಬಿಸುಗಣ್ಣಮಗಂ, ಅರೆವಾನಿಸವಗೆಯಂ— ಈ ೫ ವೀರಭದ್ರಂಗೆ ಪೆಸರ್.

೭. ಗೊಂದೆಯೆಂದು ವೃಷಭಂ.

೮. ತೋಳ್ದೇರಂ, ಬಿಗುವರ್ಗರಿಜಂ— ಈ ೨ ಭೈರವಂಗೆ ಪೆಸರ್.

೯. ಅರಲ್ವಡೆಯಂ, ಎಲರುಣಿವಜ್ಜಗಂ, ಪಾಱುಂಬಳಿಗ್ಯೆಯಂ, ಪೆರ್ದುರ್ಗದೇರಂ, ಸೌರಿ, ತೊಂಗಡಲಳಿಯಂ, ಸಿರಿಯುರಸಂ, ರಕ್ಕಸಬೇರಂ, ತಾವರೆಗಣ್ಣಂ,

---

$ ಬಿಂಕಣಿ.

ಮುನ್ನೀರ್ವರ್ಚ್ಚಿಗಂ, ಕಾರೊಡಲಂ, ಕಾವನಯ್ಯಂ—ಈ ೧೨ ವಿಷ್ಣುಗೆ ಪೆಸರ್.

೧೦. ಪೊಱಂಬಳ್, ಬಟ್ಟಗೈದು— ಈ ೨ ಚಕ್ರಂ.

೧೧. ಇಂಗಡಲಣುಗಿ, ಸಿರಿ, ಮಾಲಕುಮಿ—ಈ ೩ ಲಕ್ಷ್ಮಿಗೆ ಪೆಸರ್.

೧೨. ಪಕ್ಕಿಗಳಾಣ್ಮಂ, ಎಲರುಣಿವಗೆಯಂ, ಪರ್ದು - ಈ ೩ ಗರುತ್ಮಂಗೆ ಪೆಸರ್.

೧೩. ಇಂಗೋಲ್ವಿಲ್ಲಂ, ಬಂಡುಣಿಪಿದೆಯಂ, ಕಮ್ಮಂಗಣೆಯಂ, ಸುಗ್ಗಿಗೆಳೆಯಂ, ಪೆರ್ಗೊಡೆಯಂ, ಪೆಣ್ಬಡೆಯಂ, ಬಗೆಯೊಳೊಗೆವಂ, ಮೀಂಬಟ್ಟಯಿಗೆಯಂ, ಪೂಪುಣಂಬಂ, ಜತಿನಗೆಯಂ, ಕುಡುವಿಲ್ಲಂ, ಐಸರಲಂ, ಗಿಳಿದೇರಂ— ಇವು ೧೩ ಕಾಮದೇವಂಗೆ ಪೆಸರ್.

೧೪. ಇಚ್ಛೆಗಾರ್ತಿಯೆಂದು ರತಿ.

೧೫. ಅಂಚೆದೇರಂ, ನುಡಿವೆಣ್ಣಿನಿಯಂ, ಪ್ರೊಂಬುಸಿಱಂ, ಬಿದಿ, ತಂದೆಯತಂದೆ, ಅರಲಿಱಂ, ನಾಲ್ಮೊಗಂ, ತಾವರೆವಸೆಯಂ— ಈ ೮ ಬ್ರಹ್ಮಂಗೆ ಪೆಸರ್.

೧೬. ನುಡಿವೆಣ್, ಬಾಸೆವೆಣ್, ಸೊಲ್ವೆಣ್, ಮಾತೆರ್ಯಳ್, ಸಾರದೆ, ಸರಸತಿ—ಈ ೬ ಸರಸ್ವತಿಗೆ ಪೆಸರ್.

೧೭. ಬರ್ದಿಲಂ*, ಸಗ್ಗಂ— ಈ ೨ ಸ್ವರ್ಗದ ಪೆಸರ್.

೧೮. ಅಮರ್ದು*, ಸೊದೆ, ಪನಿದು, ಉಣ್ಬುದರಬೀಯಂ—ಈ೪ಅಮೃತಂ.

೧೯. ಅಮರ್ದುಣಿಸುಗಳ್*, ಕನಸಿಲ್ಲದರ್, ನರೆದೋಱದರ್, ಎವೆಯಿಕ್ಕದರ್, ಜನ್ನಗೊಟ್ಟರ್, ಬಿಜ್ಜೋದರರ್, ಗಾಳವಟ್ಟಗರ್, ಅಚ್ಚರರ್, (ಬೇಳಯರ್)— ಈ ೯ ದೇವರ್ಕಳ ಪೆಸರ್.

೨೦. ಇಂದಿರಂ, ಪಲಗಣ್ಣಂ, ಮುಗಿಲ್ದೇರಂ, ಸಗ್ಗಗರಾಣ್ಮಂ,—ಈ ೪ ಇಂದ್ರನ ಪೆಸರ್.

೨೧. ಬಜ್ಜರವೆಂದು ವಜ್ರಾಯುಧಂ.

೨೨. ರಕ್ಕಸರ್, ಮರ್ಬಿಗರ್, ಚಱಕ್ಕಿಗುವರರ್, ಮೊದಲಸಗ್ಗಿಗರ್— ಈ ೪ ರಕ್ಕಸರ ಪೆಸರ್.

೨೩. ಜೋಸೊಡಲಂ, ಸವಿಗಡಲಣುಗಂ, ಅಮರ್ದುಗೈಯಂ*, ಐಕಿಲ್ವೆಳಗಂ, ಮೀಂಗಳೆಱಯಂ, ನೆಯ್ದಿಲ್ಗೆಳೆಯಂ, ಬೆಳ್ಗದಿರಂ, ಇರುಳರಸಂ, ಚಂ

ದಿಥಂ, ಚಂದಂ, ವಿಧು, ಮಿಗಲಚ್ಛಣಂ, ಕುಳಿರ್ವೆಳಗಂ, ತಣ್ಗದಿರಂ, ಅಲಿವೆಳಗಂ, ಮಂಜುಗ್ಗೈಯುಂ, ಚಳಿಗದಿರಂ, ಹಿನಗದಿರಂ, ಕತ್ತಲೆವಗೆ, ತಿಂಗಳ್— ಈ ೧೨ ಚಂದ್ರನ ಪೆಸರ್.

೨೪. ಬಟ್ಟಂದುವ$ಮಂಡಲಂ.

೨೫. ಜೊನ್ನಮೆಂದುಂ, ಬೆಳ್ದಿಂಗಳೆಂದುಂ, ಜ್ಯೋತ್ಸ್ನ.

೨೬. ಕಂದೆಂದುಂ, ಕಱೆಯೆಂದುಂ, ಕಳಂಕಂ.

೨೭. ನೆಱೆವೆಱೆಯೆಂದು ಪೂರ್ಣಚಂದ್ರಂ; ಅರೆವೆಱೆಯೆಂದು ಅರ್ಧಚಂದ್ರಂ; ಎಳವೆಱೆಯೆಂದು ಬಾಲಚಂದ್ರಂ.

೨೮. ತಾವರೆಗೆಳೆಯಂ, ಪಗಲಬೆಳಗಂ. ಬೆಂಗದಿರಂ, ನೇಸಱು, ಪೊೞ್ತು, ಸಾಸಿರ್ಗೈಯಂ, ಬಾನ್ಮಣಿ, ನಿಸಿವಗ, ಬಿಸುಗದಿರಂ, ತಾವರೆಗ್ಗೆಯಂ, ಗರಂಗಳಾಣ್ಮಂ— ಈ ೧೧ ಸೂರ್ಯನ ಪೆಸರ್.

೨೯. ಉಮ್ಮೆಯೆಂದುಂ, ಸೆಗಳ್ಕೆಯೆಂದುಂ, ಝಳವೆಂದುಂ— ಉಷ್ಣಕ್ಕೆ ಪೆಸರ್.

೩೦. ಬಯಲ್ತೊರೆ, ಬಿಸಿಲ್ಗದುರೆ—ಈ ೨ ಮರೀಚಿಕಾಜಲಂ.

೩೧. ಬಾಂಬಾವೆಂದು ರಾಹು.

೩೨. ಚಮ್ಮೆಳಯೆಂದು ಕೇತು.

೩೩. ಮರಗೂಂಟಂ, ಪೊಗೆವೆಱಯಿಗೆಯುಂ, ಕರ್ಬೊಟ್ಟಗಂ, ಸಗ್ಗಿಗರ ಹಬಳಂ, ಅಗಿನಿ, ಮೂಱಡಿಗಂ, ಅಮಳ್ದಲೆಯುಂ, ಅಗ್ಗಿ, ಮಿಸುನಿವೊಗಂ. ಹಗ್ಗಿ, ಕಿಚ್ಚು, ಇಂಗಳಂ, ಎಲರ್ಗೆಳೆಯಂ— ಈ ೧೩ ಅಗ್ನಿ

೩೪. ಕಿರ್ಚೆಂದು ದಾಹಂ.

೩೫. ಅಱಂ, ನೇಸರ್ಗುವರಂ, ಜಕ್ಕಂದೊಳಲಿದೇರಂ, ಜವಂ, ಜಗುನೆಯ ಪಿರಿಯಂ —ಈ ೫ ಯಮಂಗೆ ಪೆಸರ್.

೩೬. ಮಾನಿಸದೇರನೆಂದು, ನೈರ್ಋತ್ಯಂ.

೩೭. ನೆಗೞ್ದೇರಂ, ಪಶ್ಚಿಮದೆಸೆಗೊಡೆಯಂ, ನೀರೊಟ್ಟಲಾಣ್ಮಂ— ಈ ೩ ವರುಣಂಗೆ ಪೆಸರ್.

---

$ ಇಂದುಮಂಡಲಂ.

೩೮. ಕಂಪ್ರುವಳಂ, ಎರಲ್, ಮಿಗದೇರಂ, ಎಲರ್, ಗಾಳಿ— ಈ ೫ ವಾಯುವ ಪೆಸರ್.

೩೯. ಪೊನ್ನೊಡೆಯಂ, ತಿಸುಳಗೆಳೆಯಂ— ಈ ೨ ಕುಬೇರಂ.

೪೦. ಗೊಂಟು, ದೆಸೆ— ಈ ೨ ದಿಕ್ಕು.

೪೧. ಆಗಸಂ, ವಿಹಾಂಬಟ್ಟೆ, ಎರಲ್ವಟ್ಟೆ, ಸಗ್ಗವಟ್ಟೆ, ಮುಗಿಲ್ವಟ್ಟೆ, ಬಾನ್— ಈ ೬ ಆಕಾಶಂ.

೪೨. ನೀರ್ದೇರ್, ಮುಗಿಲ್— ಈ ೨ ಮೇಘಂ.

೪೩. ಮೀನ್, ತಾರಗೆ, ಅಜಿಲ್— ಈ ೩ ನಕ್ಷತ್ರಕ್ಕೆ ಪೆಸರ್

೪೪. ಸಗ್ಗವೆಟ್ಟೆಂದುಂ, ಸೊನ್ನವೆಟ್ಟೆಂದುಂ, ಮೇರುಗಿರಿ.

೪೫. ಪಿಂಜರಿವೆಟ್ಟೆಂದು ಬೆಳ್ಳವೆಟ್ಟಂ.

೪೬. ಐಕಿಲ್ವೆಟ್ಟೆಂದು ಹಿಮಶೈಲಂ.

೪೭. ¶ಕರ್ವೆಟ್ಟೆಂದು ನೀಲಾಚಲಂ.

೪೮. ಬಿಂಜವೆಟ್ಟೆಂದು ವಿಂಧ್ಯನಗಂ.

೪೯. ಬಾವನ್ನವೆಟ್ಟೆಂದು ಮಲಯಾಚಲಂ.

೫೦. ಮೂಡಣವೆಟ್ಟೆಂದು ಪೂರ್ವಾಚಲಂ.

೫೧. ಪಡುವೆಟ್ಟೆಂದು ಪಶ್ಚಿಮಾದ್ರಿ.

೫೨. ಸೆಲೆಯೆಂದು ಶಿಲೆ.

೫೩. ಸಸಿಗಲ್, ತಣ್ಗಲ್— ಈ ೨ ಚಂದ್ರಕಾಂತಂ.

೫೪. ನೇಸರ್ಗಲ್, ಬಿಸುಗಲ್— ಈ ೨ ಸೂರ್ಯಕಾಂತಂ.

೫೫. ಪಳಕೆಂದು ಸ್ಫಟಿಕಂ.

೫೬. ಕರ್ಬೊನ್ಗಲ್ಲೆಂದು ಸೂಜಿಕಲ್

೫೭. ಕಿಸುಗಲ್, ಕೆಂಬರಲ್, ರನ್ನಂ— ಈ ೩ ಕುರುವಿಂದಂ.

೫೮. ರಾಜಾವರ್ತವೆಂದು ಎಳನೀಲಂ.

೫೯. ಜಾಗವರಲ್, ಪಸುರ್ಮಣಿ— ಈ ೨ ಮರಕತಂ.

೬೦. ಬಜ್ಜರವೆಂದು ವಜ್ರಂ.

---

¶ ಕಜ್ಜಿವಟ್ಟು.

೬೧. ಸೊನ್ನ್, ಕಸವರಂ, ಚೆಂಬೊನ್, ಮಿಸುನಿ— ಈ ೪ ಸುವರ್ಣಂ.

೬೨. ಬಿಂಜರಿಯೆಂದು ಬೆಳ್ಳಿ.

೬೩. ಸುಲುವೆಂದುಂ, ಕಿಸುವೆಂದುಂ, ಕೆಂಪೆಂದುಂ—ತಾಮ್ರಂ.

೬೪. ಕಬ್ಬೊನ್ನೆಂದು ಕಬ್ಬುನಂ

೬೫. ಉಕ್ಕೆಂದು ಉಕ್ಕು ; ಗರ್ವಮುಮುಕ್ಕುಂ.

೬೬. ಪಡೆಯೆಂದು ಕಲ್ಲಸುಣ್ಣ.

೬೭. ಸರಿಯೆಂದು ಕಮ್ಮಣ್ಣ.

೬೮. ತೆಬ್ಬಲೆಂದು ಸೀಸ.

೬೯. ಕಡವೆಂದು ಕದಂಬದ್ರುಮಂ.

೭೦. ಕೊಸಗೆಂದುಂ, ಬೆಟ್ಟದಾವರೆಯೆಂದುಂ ಕರ್ಣಿಕಾರಂ.

೭೧. ಸಿರಿಕಂಡಮೆಂದುಂ, ಬಾವನ್ನಮೆಂದುಂ ಮಲಯಜಂ.

೭೨. ಮುತ್ತುಗಮೆಂದು ಪಲಾಶವೃಕ್ಷಂ.

೭೩. ಪಾಡಗಮೆಂದು ತೇಗು.

೭೪. ಬಿಕ್ಕೆಂದೊಂದು ಮರಂ.

೭೫. ಮತ್ತಿಯೆಂದರ್ಜುನಂ.

೭೬. ಕೋಡೆಂದುಂ, ಕೈಯೆಂದುಂ, ಕೊಂಬೆಂದುಂ, ವೃಕ್ಷಶಾಖೆ.

೭೭. ಪೊಟಲೆಂದು ಮರದ ಪೊಡೆ.

೭೮. ಮಿಡಿಯೆಂದೆಳಗಾಯ್.

೭೯. ತೆಟಲೆಂದು ಮುತ್ತಕಾಯ್.

೮೦. ಕುತ್ತುರೆಂದು ಪೊದಱ್.

೮೧. ಪೆಱುವೆಂದುಂ, ಬಿಂಜಮೆಂದುಂ, ಅಡವಿ.

೮೨. ಬನವೆಂಕೆಯೆಂದು ದಾವಾಗ್ನಿ.

೮೩. ಸೊರ್ಕುನೀರೆಂದು ಮದಜಲಂ.

೮೪. ಸರುವೆಂದು §ಮಿಗವಟ್ಟೆ.

೮೫. ಹಣೆಯೆಂದು ಮಿಗದಿಕ್ಕೆ.

೮೬. ಬಗ್ಗಮೆಂದು ವ್ಯಾಘ್ರಂ.

§ ಮಿಗವಕ್ಕೆ.

೮೭. ಎಂಟಡಿಯೆಂದು ಶರಭಂ.

೮೮. ಅಮಳ್ದಲೆವಕ್ಕಿಯೆಂದು ಭೇರುಂಡಂ.

೮೯. ಕರಿಯೆಂದಾನೆ.

೯೦. ಕುಂಭತಳವೆಂದು ಕುಂಭಸ್ಥಳಂ.

೯೧. ನಿಗ್ಗವೆಂದು ದಂತಂ.

೯೨. ಪಲ್ಲವಱಿಯೆಂದು ಕಲಭಂ.

೯೩. ಪಿಡಿಯೆಂದು ಪೆಣ್ಣಾನೆ.

೯೪. ಮಿಗವೆಂದೆರಲೆ.

೯೫. ಎಕ್ಕಲನೆಂದು ಕ್ರೋಡಂ.

೯೬. ಮೋರವೆಂದುಂ, ಸೋಗೆಯೆಂದುಂ, ನವಿಲ್.

೯೭. ಬಾನಾಡಿಯೆಂದು ಟಿಟ್ಟಿಭಂ.

೯೮. ಟೀವವೆಂದುಂ, ಆಗಸವಕ್ಕಿಯೆಂದುಂ, ಖಂಜರೀಟಂ

೯೯. ಮಕ್ಕಡವೆಂದು ಮರ್ಕಟಂ.

೧೦೦. ಐಮೊಗವೆಂದುಂ, ಸಿಂಗವೆಂದುಂ, ಸಿಂಹಂ.

೧೦೧. ಎಱಂಕೆಯೆಂದುಂ, ಪಕ್ಕವೆಂದುಂ, ಪಕ್ಷಂ.

೧೦೨. ತಿಪ್ಪುೞೆಂದು ಗಱಿ.

೧೦೩. ತುಪ್ಪುೞೆಂದು ಪಕ್ಕಿಯ ರೋಮಂ.

೧೦೪. ತೇಂಗುಹವೆಂದು ಪಕ್ಕಿಯೆಱಗುಹಂ.

೧೦೫. ಚಿಲಿಮಿಲಿಯೆಂದು ಪಕ್ಕಿಗಳುಲುಹು.

೧೦೬. ಎರೆಯೆಂದು ಪಕ್ಕಿಗಳುಣಿಸು.

೧೦೭. ಕದರ್ಂಕೆಂದು ಚಂಚುಘಾತಂ.

೧೦೮. ಪೇರಡಿ, ನೋಣಗಂ, ಜಾಯಿಲಂ—ಈ ೩ ಕುಕ್ಕುರಂ.

೧೦೯. ತಿವಿಯೆಂದು ಹಾಸಂ ಕೞಲ್ವುದು.

೧೧೦. ಕೋಣಸೆಂದು ಮೃಗಶಿಶು.

೧೧೧. ಧಿಂಕಿಡುವುದೆಂದುಂ, ಕೋಣಾಕಿಡುವುದೆಂದುಂ, ಸುರಳಿಸಿತೆಂದುಂ-ದಾಂಟುವುದರ್ಕೆ ಪೆಸರ್.

೧೧೨. ಕೊತ್ತಳಿಯೆಂದು ಕಾಕಸಮೂಹಂ.

೧೧೩. ಬಿಯದರೆಂದುಂ, ಬಿಲ್ಲರೆಂದುಂ, ವ್ಯಾಧರ್.

೧೧೪. ಕೋಯಂಡಮೆಂದು ಬಿಲ್.

೧೧೫. ತಿರುವೆಂದುಂ, ತಿಬ್ಬೆಂದುಂ, ಬಿಲ್ಲ ನಾರಿ.

೧೧೬. ಗೊಲೆಯೆಂದುಂ, ಕೊಪ್ಪೆಂದುಂ, ಧನುಷ್ಕೋಟಿ.

೧೧೭. ಮೂಡಿಗೆ, ತೂಣಿ, ಬತ್ತಳಿಕೆ— ಈ ೩ ಬೆನ್ನಹೊದೆ.

೧೧೮. ಪಿಳ್ಕೆಂದು ಸಾಯಕಪುಂಖಂ.

೧೧೯. ಪುಣುಂಬು, ಸರಲ್, ಕಣೆ, ಕೋಲ್— ಈ ೪ ಅಂಬಿಗೆ ಪೆಸರ್.

೧೨೦. ಜೇವೊಡೆಯೆಂದು ಜ್ಯಾರವಂ.

೧೨೧. ಡಂಗೆಯೆಂದು ಬಡಿಗೋಲ್.

೧೨೨. ಗಾಳವೆಂದು ಬಡಿಶಂ.

೧೨೩. ಅಡಗು, ಬಿಕ್ಕ, ಬಾಡು— ಈ ೩ ಮಾಂಸಂ.

೧೨೪. ಸುಂಟಗೆಯೆಂದುಂ, ಕೊಟ್ಟಸವೆಂದುಂ— ಸುಡುಬಾಡು.

೧೨೫. ತೊವಲ್, ಸವ್ಮಂ, ತೋಲ್— ಈ ೩ ಚರ್ಮಂ.

೧೨೬. ತುಱುವಳನೆಂದು ಗೋಪಾಳಂ.

೧೨೭. ತುಱುಗಾರ್ತಿಯೆಂದು ಗೋಪಿ.

೧೨೮. ಕಱಿಯೆಂದು ಗೋಸಮೂಹಂ.

೧೨೯. ಆಕಳೆಂದು ಪಶು.

೧೩೦. ಕಿಱಳೆಂದು, ಕಂದೆಂದು, ಗೋವತ್ಸಂ.

೧೩೧. ಅಡೆಯೆಂದು ಗೋಮಯಂ.

೧೩೨. ಪರಣವೆಂದು ಕಱುವಿನ ಸೆಗಣಿ.

೧೩೩. ಆಂಗೊಳಗೆಂದು ಆವಿನ ಕೊಳಗು.

೧೩೪. ಕೀರವೆಂದು ಕ್ಷೀರಂ.

೧೩೫. ಕಬಲೆಂದು ದಧಿ.

೧೩೬. ಅಳೆಯೆಂದು ತಕ್ರಂ.

೧೩೭. ನೆಯ್ಯೆಂದಾಜ್ಯಂ.

೧೩೮. ಇಱಿಯೆಂದು ಕಱೆವುದು.

೧೩೯. ಕೈಕೋಲೆಂದು ಕಡೆಗೋಲ್.

೧೪೦. ಪೊಸೆಯೆಂದುಂ, ಕಡೆಯೆಂದುಂ, ಮಂಥಾನಂ.

೧೪೧. ಮುನ್ನೀರ್, ನೀರೊಟ್ಟಿಲ್, ತೆರೆಗಳಾಣ್ಮಂ, ( ಕಡಲ್ )— ಈ ೪ ಸಮುದ್ರಂ.

೧೪೨. ಸುೞಿಯೆಂದು ಜಲಾವರ್ತಂ.

೧೪೩. ವಳಿಯೆಂದು ತರಂಗಂ.

೧೪೪. ಜತ್ತುಳವೆಂದು ಫೇನಂ.

೧೪೫. ಸೀವರಮೆಂದುಂ, ತಂದಲೆಂದುಂ, ಶೀಕರಂ.

೧೪೬. ಮುನ್ನೀರ್ವೆಂಕೆಯೆಂದು, ಕಡಲ್ಗಿಚ್ಚೆಂದು, ಬಡಬಾನಲಂ.

೧೪೭. ತೀರಮೆಂದು ತಟಂ.

೧೪೮. ಚೆಂಗುಡಿಯೆಂದು ಪ್ರವಾಳಂ.

೧೪೯. ಮುಗಿಲ ಪೂವೆಂದು ಜಲಂ.

೧೫೦. ಕಾರೆಂದು ಜಲದಾಗಮಂ.

೧೫೧. ಸರಿಯೆಂದು ಮೞೆ.

೧೫೨. ಮುಗಿಲ್ವೆಳಗೆಂದು ಮಿಂಚು.

೧೫೩. ಮುಗಿಲ್ಗಿಚ್ಚೆಂದು ಸಿಡಿಲ್.

೧೫೪. ಆಲಿವಗಲೆಂದುಂ, ಮುಗಿಲ್ಗಲ್ಲೆಂದುಂ, ಘನೋಪಲಂ.

೧೫೫. ಕೆಂಬುಳುವೆಂದಿಂದ್ರಗೋಪಂ.

೧೫೬. ಇಂದಿರವಿಲ್ಲೆಂದು ಶಕ್ರಚಾಪಂ.

೧೫೭. ಕಾಪ್ಪುರಮೆಂದು ಕಾಡ ಹೇನಲ್.

೧೫೮. ಪೊಚ್ಚಮೆಂದು ಪೂಳ್.

೧೫೯. ಬೞ್ಕೆಂದು ನದೀಪ್ರವಾಹಂ.

೧೬೦. ಪಲ್ಲಲಮೆಂದುಂ, ಬೆಂಚೆಯೆಂದುಂ, ಅಲ್ಪಸರಸಿ.

೧೬೧. ಸೇವಾಳಮೆಂದು ಹಾವಸೆ; ಪುಷ್ಪನಾವಂ.

೧೬೨. ಪುೞಿಲೆಂದು ಮಳಲೊಟ್ಟಿಲ್.

೧೬೩. ಅೞಲೆಂದು ಪಂಕಂ.

೧೬೪. ಅಡಿವಣಿಯೆಂದು ಕೆಸಱೊಳಾದ ಪೆಜ್ಜೆ.

೧೬೫. ಕೆಸರ್ವುಟ್ಟಿಗೆ, ಸಿರಿಯಕರುಮಾಡಂ, ತಾಮರೆ, ನೀರ್ವೂ— ಈ ೪ ಕಮಲಕ್ಕೆ ಪೆಸರ್.

೧೬೬. ಅವಲೆಂದುಂ, ಚೆಂಗಲವೆಯೆಂದುಂ, ಚೆನ್ನೆಯ್ದಿಲ್.

೧೬೭. ಸೌಸವಂ, ನಱು, ಕಮ್ಮಿತು, ಸೊವಡು, ಕಂಪು, ನಾತಂ ಗಮಗಿಸು— ಈ ೭ ಪರಿಮಳಕ್ಕೆ ಪೆಸರ.

೧೬೮. ಅಲರ್, ಅರಲ್, ಮರಲ್, ಮಲರ್— ಈ ೪ ಪುಷ್ಪಂ.

೧೬೯. ಅಲರ್ವುಡಿಯೆಂದು ಪರಾಗಂ.

೧೭೦. ಬಂಡೆಂವು ಮಕರಂದಂ.

೧೭೧. ಬನಮೆಂದು ವನಂ.

೧೭೨. ಬಸಂತಂ, ಸುಗ್ಗಿ, ಹೂವಿನಹಬ್ಬಂ— ಈ ೩ ವಸಂತಂ.

೧೭೩. ನಿಱುಗಮೆಂದಿಮ್ಮಾವು.

೧೭೪. ಅಸುಕೆಯೆಂದಶೋಕಂ.

೧೭೫. ಕೌಂಗೆಂದು ಕ್ರಮುಕಂ.

೧೭೬. ಈಳೆಯೆಂದು ನಾರಂಗಂ.

೧೭೭. ಬಂದಮಾವೆಂದು ಫಲಿತರಸಾಲಂ.

೧೭೮. ನಟ್ಟಗೊಂಬೆಂದು ನಡುಗೊಂಬು.

೧೭೯. ಕೊಳಮೇರೆಂದುಂ, ಬಾಳಮೆಂದುಂ, ಲಾಮಂಚಂ.

೧೮೦. ಅದಿಮುರ್ಗಾತ್ತೆ, ¶ ಮೊಂದೆ, ಅದಿರ್ಗಂತಿ— ಈ ೩ ಮಾಧವಿ.

೧೮೧. ಗೆಱುವೂವೆಂದು ಕೇತಕಿ.

೧೮೨. ಜಾದಿಯೆಂದು ಮಾಲತಿ.

೧೮೩. ಅಜ್ಜಗೆಯೆಂದಿರವಂತಿಗೆ.

೧೮೪. ಪಡ್ಡಳಿಯೆಂದು ಕಣಿಗಿಲೆ.

೧೮೫. ಸಜ್ಜಕಂ, ನನೆ, ಮೊಗ್ಗೆ, ಮುಗುಳ್— ಈ ೪ ಕುಟ್ಮಲಂ.

೧೮೬. ಮಡಲ್ತುದೆಂದು ಪರ್ವಿದುದು.

೧೮೭. ಪಗಿಲ್ತುದೆಂದು ಪತ್ತಿದುದು.

೧೮೮. ಜಿಗಿಲ್ತುದೆಂದು ಸೆಱಗೊಂಡುದು

೧೮೯. ನನೆತುದೆಂದು ನನೆಮೆತ್ತುದು.

---

¶ ಮೊಂಥೆಯು.

೧೯೦. ಮುಗುಳ್ತುದೆಂದು ಮುಗುಳೇೞ್ದುದು.

೧೯೧. ತಳಿರ್ತುದೆಂದುಂ, ತಳಿರೇೞ್ದುದೆಂದುಂ, ತಳಿರಿಡಿದುದು.

೧೯೨. ಪೂತುದೆಂದು ಪೂವಾದುದು.

೧೯೩. ಕಾತುದೆಂದು ಕಾಯಾದುದು.

೧೯೪. ಪಣ್ತುದೆಂದು ಪಣ್ಣಾದುದು.

೧೯೫. ಅಗೆಯೆಂದುಂ, ಮೊಳೆಯೆಂದುಂ, ಅಂಕುರಂ.

೧೯೬. ತೊಡಂಬೆ, ತೊಡಬೆ, ತೊಂಗೆ, ತೊಂಗಲ್, ಜೊಂಪಂ, ಗೊಂಚಲ್, ಗುಚ್ಛಂ— ಈ ೭ ಪುಷ್ಪಮಂಜರಿ.

೧೯೭. ಹಬ್ಬದಹೂವೆಂದು ದವನಂ.

೧೯೮. ಅಲರ್ವಕ್ಕಿ, ಬಂಡುಣಿ, ಪಱಮೆ, ಮಲ್ಲೞಿ, ಮೊಳಂಬಂ, ಬವರಂ, ಮುಯ್ಯೆರಡಡಿ— ಈ ೭ ಭ್ರಮರಂ.

೧೯೯. ಕೊಂಚೆಯೆಂದು ಕ್ರೌಂಚಂ.

೨೦೦. ಪೊಣರ್ವಕ್ಕಿ, ಜಕ್ಕವಕ್ಕಿ, ಬಿಸಿಲ್ವಕ್ಕಿ, ಎಣೆವಕ್ಕಿ, ಜೋಡುವಕ್ಕಿ, ಗೆಡೆವಕ್ಕಿ, ಅಮಳ್ವಕ್ಕಿ— ಈ ೭ ಚಕ್ರವಾಕಂ.

೨೦೧. ಕನ್ನಡವಕ್ಕಿ, ಪಂಡಿತವಕ್ಕಿ— ಈ ೨ ಗಿಳಿ.

೨೦೨. ಜೊನ್ನವಕ್ಕಿ, ತಣ್ಗದಿರ್ವಕ್ಕಿ— ಈ ೨ ಚಕೋರಂ.

೨೦೩. ಪುರುಳಿಯೆಂದುಂ, ಸಾರಿಕೆಯೆಂದುಂ ಪೆಣ್ಗಿಳಿ.

೨೦೪. ತೊಂಡುಗೆಡೆವುದೆಂದು ಶುಕವಿಲಾಸಂ.

೨೦೫. ಪಡಿಯುಲಿವಕ್ಕಿ, ಪೊರ್ಕುೞಿಯಪಕ್ಕಿ, ಕೆಂಗಣ್ಣಲರ್ವಕ್ಕಿ, ಸುಗ್ಗಿವಕ್ಕಿ, ಪೆರಪುಟ್ಟಂ— ಈ ೫ ಪಿಕಂ.

೨೦೬. ಕಹಕಹಮೆಂದು ಸಾರಸವಕ್ಕಿಯ ಧ್ವನಿ.

೨೦೭. ಜಡಿಪಮೆಂದು ಕೋಗಿಲೆಯ ಚಪ್ಪರಣೆ.

೨೦೮. ಕುಕಿಲ್ತುದೆಂದುಂ, ಪುಗಿಲ್ವಗಿಲೆಂದುಂ, ಕೋಕಿಲಾಲಾಪಂ.

೨೦೯. ರಾಯಂಚೆಯೆಂದು ರಾಜಹಂಸೆ.

೨೧೦. ಎಳೆ, ಪೊಡವಿ, ತಿರೆ, ದರೆ, ರನ್ನವಸಿಱಳ್, ಬೂವಿ, ಬುವಿ— ಈ ೭ ಭೂಮಿ,

೨೧೧. ನಿಗಳ, ನೆಟ್ಟು*, ಕೆನೆ, ಚೊಕ್ಕಳಿಕೆ, ಚೊಕ್ಕ, ಹಸ, ಎಡ್ಡ, ಅನು, ಅಣಿ, ರಯ್ಯ, ಲೇಸು, ಬಳ್ಪು, ಕಣ್ಗೆವಂದುದು, ಪರಿವಡೆದುದು— ಈ ೧೪ ಮನೋಹರಂ.

೨೧೨. ತೊಳಗು, ಬೆಳಗು, ಮಿನುಗು, ಮಿಱುಗು, ಕದಿರ್, ಕಳೆ, ಹಬೆ, ಪೊಳಪು, ಪೊಣರ್, ಮಿಂಚು, ಡಾಳಂ, ಪೊಗರ್, ತೊಳಪಂ, ಮಸೆ— ಈ ೧೪ ಕಾಂತಿ.

೨೧೩. ಬೆಳ್ಪುಳಿಯೆಂದು ನಿರ್ಮಳಿಕೆ.

೨೧೪. ಜಳಕ್ಕನೆಂದುಂ, ಪಳಚ್ಚನೆಂದುಂ, ನಿರ್ಮಲಂ.

೨೧೫. ಉಜ್ಜಳವೆಂದುಂ, ಪಜ್ಜಳವೆಂದುಂ, ಪ್ರಜ್ವಲಂ.

೨೧೬. ತೆಱಂಬೊಳೆದುದೆಂದು ತೋರ್ಕೆವಡೆದ ಕಾಂತಿ.

೨೧೭. ಮಸಮಸವಾದುದೆಂದು ಬೆಳಗೞಿದುದು.

೨೧೮. ಕೆಂಕವೆಂದುಂ, ಕೆಂಗೆಲ್ಲೆಂದುಂ, ಕಿಸುವೆಂದುಂ, ಕೇಸೆಂದುಂ— ಈ ೪ ಅರುಣವರ್ಣಂ.

೨೧೯. ಜಾಗವೆಂದುಂ, ಪಸುರ್ಪೆಂದುಂ, ಮರಕತವರ್ಣಂ.

೨೨೦. ಬೆಳರ್ವಣ್ಣವೆಂದು ಧವಳಂ.

೨೨೧. ಕವಿಲೆವಣ್ಣವೆಂದು ಪೊಂಬಣ್ಣಂ.

೨೨೨. ಬಂಬಲ್, ತುಱುಗಲ್, ವಂಗಡಂ, ಗಡಣಂ, ಮೊಗ್ಗರಂ, ಬಿಂದಂ, ಬುಬ್ಬುಳ, ಜಂಗುಳ, ದೊಂದುಳ, ಸಂದಣಿ, ಬಗ್ಗ, ಪಸರಂ, ಇಟ್ಟಳಂ, ಲಾವಣಿ, ಬಳ, ಗೊಂಚಿ, ಬಟ್ಟಲ್, ಬಟ್ಟಜೆ, ತಿಂತಿಣಿ, ಹೊರಳಿ, ಕದಲೆ, ಸಂತೆ, ಜಾಳಗೆ, ಕಿಕ್ಕಿಂದಂ, ನೆರವಿ, ಬಳಗಂ, ಮೊತ್ತಂ, ಸೇಣಿ, ತಂಡಂ, ಗುಂಡು, ಪಿಂಡು, ತೆರಳ್ಕೆ, ಹಂತಿ, ಸಾಲ್, ಮೊಕ್ಕಳಂ, ತೋವಂ, ತೆಮ್ಮಲ್, ಗುಪ್ಪೆ, ಗೊಂದಣಿ, ( ಉಂದಲ್ )— ಈ ೪೦ ಸಮೂಹಂ.

೨೨೩. ಅಗುರ್ವು, ಬಿಗುರ್, ಬೆಗರ್, ಬಳ್ಕುಡಿ, ಬೆಬ್ಬಳಂ, ಅಳ್ಕು, ಬೆಳ್ಕು, ಮಲ್ಲಿ, ತಲ್ಲಟಂ, ಅದಿರ್ಪು— ಈ ೧೦ ಭಯಂ.

೨೨೪. ಕೆಕ್ಕಳಿಸಿದುದೆಂದುಂ, ಸೀತಱಿಂದುಂ, ಭಯವಿಕಾರಂ.

೨೨೫. ನಡೆದನೆಂದುಂ, ನಡುಕಂಗೊಂಡನೆಂದುಂ, ಸುರುಳ್ದನೆಂದುಂ,

*, ನೆಂಟೆ, ನೆಟ್ಟು.

ಸೂಗಿದನೆಂದುಂ, ಉಗಿದನೆಂದುಂ, (ಆಗಿದನೆಂದುಂ), ಅಳ್ಕಿದನೆಂದುಂ, ತೆಮರ್ತನೆಂದುಂ— ಈ ೮ ಭಯಂಗೊಂಡವಂ.

೨೨೬. ಬೇಗುದಿ, ಉಬ್ಬೆಗಂ, ಅದವೞಲ್— ಈ ೩ ಸಂತಾಪಂ.

೨೨೭. ಬೇವಸಂ, ದುಮ್ಮಾನಂ, ಉಮ್ಮಳಂ— ಈ ೩ ಚಿಂತೆ.

೨೨೮. ದೂಱುವುದೆಂದು ಚಿಂತಿಪುದು.

೨೨೯. ತುರಿಹಂ, ಭೋರನೆ, ಭೋಂಕನೆ, ಚಕ್ಕನೆ, ಗಬಗಬನೆ, ಧಿಕ್ಕನೆ, ಘೞಿಲನೆ, ಬೇಗಂ— ಈ ೮ ಶೀಘ್ರಂ.

೨೩೦. ಪೇಗಾಯಿಲನೆಂದು ಹರಿಕಾಱಂ.

೨೩೧. ಪೆಕ್ಕ್ರವಂ ? ಬಿಂಕಂ, ಪೆರ್ಗ್ಗು, ಪಂತ, ಹೆಮ್ಮು, ಗಬ್ಬಂ, ಅದಟು— ಈ ೬ ಗರ್ವಂ.

೨೩೨. ಹೆಮ್ಮುದಂ, ಹರವಸಂ, ಮುಚ್ಚೆ— ಈ ೩ ಮೂರ್ಛೆ.

೨೩೩. ಬಾಕುಳ, ಪೊಗಸು, ಪಸಂ, ಇಚ್ಚೆ— ಈ ೪ ಇಚ್ಛೆ.

೨೩೪. ಉಬ್ಬರಂ, ಉಬ್ಬಟೆ, ಅಣಿಯರಂ, ಅಗುಂದಲೆ, ಅಳುಂಬಂ, ಪೆಂಪು, ಪೊಂಪುೞಿ, ಆದಂ, ಎಯ್ದೆ, ನಾಡೆ, ಕೆನ್ನಂ, ನೀಡುಂ, ಅಗ್ಗಳಂ, ಅಗ್ಗಳ, ನೆರೆ, ನೂಳದು, ವಿಶಾಂಟು, ಬಟ್ಟಜೆ, ಪೆರ್ಚುಗೆ— ಈ ೧೯ ಅತಿಶಯಂ.

೨೩೫. ಗಾವರಂ, ದನಿ, ಸೊಪ್ಪುಳ್, ಅಬ್ಬರಂ, ಸರಂ, ಉಲಿ, ಗಾವಳ— ಈ ೭ ಧ್ವನಿ.

೨೩೬. ಅಕ್ಕರಮೆಂದು ಅಕ್ಷರಂ.

೨೩೭. ಬೀಜಾಕ್ಕರಮೆಂದು ವ್ಯಂಜನಂ.

೨೩೮. ಪುರುಳೆಂದಭಿಧಾನಂ.

೨೩೯. ಚಂದಮೆಂದು ಛಂದಂ.

೨೪೦. ಲಕ್ಕಣಮೆಂದು ಲಕ್ಷಣಂ.

೨೪೧. ಬಿಜ್ಜೆಯೆಂದು ವಿದ್ಯಂ.

೨೪೨. ಓದಂ, ಪೞವಾತು, ಬೇದಂ, ಸುತಿ— ಈ ೪ ವೇದಂ.

೨೪೩. ಸಕ್ಕದಮೆಂದು ಸಂಸ್ಕೃತಂ.

೨೪೪. [illegible]ವೆಂದು ಪ್ರಾಕೃತಂ.

೨೪೫. ಅಳಕವೆಂದಲೇಖಂ.

೨೪೬. ದೆವಸವೆಂದು ದಿವಸಂ.

೨೪೭. ಬರಿಸವೆಂದು ವರ್ಷಂ.

೨೪೮. ಬೆಳ್ವಕ್ಕವೆಂದು ಶುಕ್ಲಪಕ್ಷಂ.

೨೪೯. ಅವಸೆಯೆಂದುಂ, ಅಮಾಸೆಯೆಂದುಂ, ಅಮಾವಾಸ್ಯೆ.

೨೫೦. ನಾೞಿಯೆಂದು ಗೞಿಗೆ.

೨೫೧. ಮುಂಬಗಲ್, ನಡುವಗಲ್, ಸಡೆವಗಲ್— ಇವು ೩ ತ್ರಿಕಾಲಂಗಳ್.

೨೫೨. ಮುಂಬೊೞ್ತೆಂದು ಮುನ್ನೇಸಱ್.

೨೫೩. ಪಿಂಬೊೞ್ತೆಂದು ಪಡುನೇಸಱ್.

೨೫೪. ಸನ್ನಿ, ನಿಕ್ಕುವಂ, ನಿಸದಂ, ಸಾಜಂ, † ನನಸು, ದಿಟಂ— ಈ ೬ ಸತ್ಯಂ.

೨೫೫. ಸ್ಯೆಪೆಂದುಂ, ಹೂಸ್ಯವೆಂದುಂ, ಮೃಷ್ಯಂ.

೨೫೬. ತೆಗೞ್, ‡ ಪೞಿ, ಜಸುನ್ನಂ, ಕೋೞಕಾಟಂ, ಪೞಿದಂ, ಅಣಕಂ— ಈ ೬ ನಿಂದೆ.

೨೫೭. ಬಗ್ಗು, ಬಿಪ್ಪಂಡಂ, § ಬೆಚ್ಚು, ಚಪ್ಪರಣೆ— ಈ ೪ ಜಂಕಣೆ.

೨೫೮. ¶ ಮುಱುವಸಲಂ, ಬೇರಂ, ಪಗೆ— ಈ ೩ ಶತ್ರು.

೨೫೯. ಅಡಿಯೆಂದು ವಿರೋಧಭಾವಂ.

೨೬೦. ಗೋಣ್ಮುೞು, ಇರ್ಕು, ಬರಸು— ಈ ೩ ಹಿಂಸೆ.

೨೬೧. ನೇರ್ದುದೆಂದರಿದುದು.

೨೬೨. ವಿಸಸವೆಂದು ಕ್ರೌರ್ಯದು.

೨೬೩. ಪನ್ನತಿಕೆ, ಪೆಟ್ಟುವೆರ್ಚು, ತಕ್ಕು, ಸಾಸಂ, ಅದಟು, ದರ್ಪಂ, ಆರ್ಪು, ಅಣ್ಮು— ಈ ೮ ಪರಾಕ್ರಮಂ.

---

†. ನೆನಸು. ‡. ಪಸಿಳೆ. §. ಜವ್ರು. ¶. ಮರುತ, ಸಲಂ, ಬೀರಂ, ಪಗೆ; ಮುಱುವಸಲ, ಮಾಱಿ, ಪಗೆ.

೨೬೪. ಉರ್ಕಾಳ್, ಕೂರಾಳ್, ತುಳ್ಕಿಲಾಳ್, ಬಲ್ಲಾಳ್, ಬಲ್ಬಂಟಂ— ಈ ೫ ಪರಾಕ್ರಮವುಳ್ಳಂ.

೨೬೫. ಭಂಡಣಂ, ಮೊನೆ, ಕೋಳ್ಗುಳಂ, ಜುದ್ದಂ— ಈ ೪ ಸಂಗ್ರಾಮಂ.

೨೬೬. ಕೊಂತಂ, ಡೊಂಕಣಿ,— ಈ ೨ ಸಬಳಂ.

೨೬೭. ಗೇಣೆಂದು ಸುರಿಗೆ.

೨೬೮. ಅಡ್ಡಣವೆಂದು ಖೇಟಕಂ.

೨೬೯. ಬಡ್ಡೆಂದು ಪೌಜು.

೨೭೦. ಸೀಸಕವೆಂದು ತಲೆಯ ಟೌಳ.

೨೭೧. ಜವಗವೆಂದು ಕವಚಂ.

೨೭೨. ಗುಳವೆಂದು ಆನೆಕುದುರೆಗಳ ಪಕ್ಕರಕ್ಕೆ.

೨೭೩. ಅಟ್ಟೆಯೆಂದುಂ, ಕಡುಕೆಂದುಂ, ಕಬಂಧಂ.

೨೭೪. ರುಂಡವೆಂದು ಶಿರಂ.

೨೭೫. ಸವವೆಂದು ಶವಂ.

೨೭೬. ಕೆನ್ನೀರೆಂದು ರಕ್ತಂ.

೨೭೭. ಗೊಂಕೆಯೆಂದು ಗೋಣು.

೨೭೮. ಪಂದಲೆಯೆಂದು ಪಸಿಯತಲೆ.

೨೭೯. ಮಣ್ಮುಳಿಯೆಂದು ರೂಪಳಿದ ಸಾವು.

೨೮೦. ಪೂಣೆಂದು ಪ್ರತಿಜ್ಞೆ.

೨೮೧. ಪಡೆ. ಅಣಿ, ದಳಂ, ಬಡ್ಡು, ಬಲಂ— ಈ ೫ ಸೇನೆ; ಬಲ ಶಬ್ದಂತತ್ಸಮಂ.

೨೮೨. ಪವ್ವಗೆಯೆಂದುಂ, ಕಬ್ಬನೆಯೆಂದುಂ, ಆಕಸ್ಮಿಕಂ.

೨೮೩. ಬಿಸವಂದವೆಂದು ವಿಸ್ಮಯಂ.

೨೮೪. ಬೆಕ್ಕಸವೆಂದಾಶ್ಚರ್ಯಂ.

೨೮೫. ಜಿಕ್ಕಟಂ, ಬಿನ್ನನೆ, ಬಿನ್ನಗೆ—ಈ ೩ ಸುಮ್ಮನೆಯೆಂಬರ್ಥಂ.

೨೮೬. ರಿಕ್ಕಟವೆಂದುಂ, ಮೂಗುವಟ್ಟುದೆಂದುಂ, ಮೌನಂ.

೨೮೭. ಪುೞ್ಚಱೆಂದುಂ, ಸೊನ್ನೆಯೆಂದುಂ, ಶೂನ್ಯಂ.

೨೮೮. ಹರಿಸಂ, ಸಂತಸಂ, ಅಲಂಪು— ಈ ೩ ಹರ್ಷಂ.

೨೮೯. ತಳೆದುದೆಂದುಂ, ಆಂತುದೆಂದುಂ, ತಾಳ್ದುದೆಂದುಂ, ಪೊತ್ತು
ದೆಂದುಂ, ಧರಿಸಿದುದರ್ಕೆ ಪೆಸರ್.

೨೯೦. ಇಕ್ಕೆ, ಇಂಬು, ಗೊತ್ತು, ನೆಲೆ, ತಾಣಂ, ತಾಯ್ವನೆ
ಸೆರೆ, ಪೊಱಲ್, ಚಾವಡಿ, ಬೀಡು, ಆಡುಂಬೊಲಂ, ಹಕ್ಕೆ, ಗಡಿ, ಗರುಡಿ,
ಗರಂ— ಈ ೧೫ ಆಶ್ರಯಕ್ಕೆ ಪೆಸರ್.

೨೯೧. ಸರಿ, ದೊರೆ, ಪಡಿ, ಗೆಡೆ, ಪೋಲ್, ಪಾಸಟಿ, ಎಣೆ, ತೊಣೆ,
ಸಾರ್ದಡೆ, ಪೆಱು, ಜೋಡು, ಸರಿಸ, ತೋಡು, ಓರಗೆ, ಜೋಳ್, ಹೊಯ್ಕೆ
ಯ್, ಹೋಟಿ, ಸಂಗಡಂ— ಈ ೧೮ ಸಮಾನಕೆ ಪೆಸರ್.

೨೯೨. ಪೊಱಕೆಂದು ಸಾಮಾನ್ಯಾಕೃತಿ.

೨೯೩. ಪರಿಜೆಂದು ರೂಪು.

೨೯೪. ಪಾಂಗೆಂದುಂ, ಗೆತ್ತೆಂದುಂ, ಸದೃಶಭಾವಂ.

೨೯೫. ಅಂದಂ, ಚೆಂದಂ, ಅನ್ನಂ— ಈ ೩ ಪೋಲ್ವೆ.

೨೯೬. ತಳ್ಪೊಯ್, ತಡಂಬಱೆ, ಪೋರ್ಕುೞ್, ತೊಡರ್ದುದು, ಮಾ
ರ್ಕೊಂಡುದು, ಅಂಡಲೆದುದು, ಪೆಳಂಚಿದುದು, ಅಲಗಣಸ್ತಾದುದು, ಮಿಕ್ಕು
ದು, ಅಳ್ಕಿಸಿದದು, ಓರಂಡಲಂತೆಗೆದುದು, ಜಕ್ಕುಲಿಸಿದುದು, ಎಡೆಗೆಡಿಸು, ಅಳ್ಕಿ
ದು, ಮಾಱು, ತೊಡರ್, ಉರ್ಕೇರ್ಕೆ, ಮಿಗು, ತಡಂಬೊಯ್, ... ... —
ಈ ೨೫ ಪ್ರತಿಹತಕ್ಕೆ ಪೆಸರ್.

೨೯೭. ಪೊಱಲೆಂದು ನಗರಂ.

೨೯೮. ಗಾರಿಗೆಯೆಂದು ಪರಿಚೆ.

೨೯೯. ಸಿರಿಯುದರಂ, ಸಿರಿಯುದಾರಂ, ಸಿರಿಯುಬಾರಂ— ಈ ೩ ಶ್ರೀ
ದ್ವಾರಕ್ಕೆ ಪೆಸರ್.

೩೦೦. ವಂಕದರಂ, ವಂಕದಾರಂ, ವಂಕಬಾರಂ— ಈ ೩ ವಕ್ರದ್ವಾ
ರಕ್ಕೆ ಪೆಸರ್.

೩೦೧. § ಪಾಣಿಯುದರಂ, ಪಾಣಿಯುದಾರಂ, ಪಾಣಿಯುಬಾರಂ— ಈ ೩ ಪಾನೀಯದ್ವಾರಕ್ಕೆ ಪೆಸರ್.

೩೦೨. ಕಂಟಿಯಬಾರವೆಂದು ಕಂಟಕದ್ವಾರಂ.

೩೦೩. ರಾಯಬೀದಿಯೆಂದು ರಾಜಬೀದಿ.

೩೦೪. ಕರುಮಾಡವೆಂದುಂ, ನೆಲೆಮನೆಯೆಂದುಂ, ಉಪ್ಪರಿಗೆ.

೩೦೫. ದಡ್ಡಿಯೆಂದು ಪೊಳಗೆ.

೩೦೬. ಚೌರಿಗೆಯೆಂದು ಮನೆ.

೩೦೭. ನಟ್ಟುಮನೆಯೆಂದು ನಡುಮನೆ.

೩೦೮. ಓವರಿಯೆಂದುಂ, ಗಳಂತಿಗೆಯೆಂದುಂ, ಕೋಣೆ.

೩೦೯. ಕೇರೆಂದು ಗೋಡೆ.

೩೧೦. ಮದಿಲೆಂದು ಮಗಿಲ್.

೩೧೧. ಪುದಿಯೆಂದು ದ್ವಾರಪಾರ್ಶ್ವಂ.

೩೧೨. ಪೊಸಂತಿಲೆಂದು ದೇಹಳಿ.

೩೧೩. ತಾಳೆಂದು ಅಗುಳಿ.

೩೧೪. ಪಡಿಯೆಂದು ಕವಾಟಂ.

೩೧೫. ಕಕ್ಕಂದಳಿಯೆಂದು ಕಕ್ಷ್ಯದಳಿ.

೩೧೬. ಭಂಡಾರವೆಂದು ಕೋಶಗೃಹಂ.

೩೧೭. ಸೆಜ್ಜೆಮನೆ, ಪಜ್ಜೆಮನೆ— ಈ ೨ ಶಯ್ಯಾಗೃಹಂ.

೩೧೮. ಪಜ್ಜೆಯೆಂದು ಶಯನಂ.

೩೧೯. ಸೊದೆಯೆಂದು ಸೊದೆಯುಂ, ಸುಧೆಯುಮಕ್ಕುಂ.

೩೨೦. ಆಣ್ಮಂ, ಎಱೆಯಂ, ಬಲ್ಲಹಂ— ಈ ೩ ಅಧಿಪತಿಗೆ ಪೆಸರ್.

೩೨೧. ಪೆಂಡವಾಸವೆಂದು ಅಂತಃಪುರಸ್ತ್ರೀಯರ್.

೩೨೨. ಅಂತವುರವೆಂದು ಅಂತಃಪುರಂ.

೩೨೩. ಪಟ್ಟವಣೆಯೆಂದುಂ, ಚಿತ್ತರಿಯೆಂದುಂ, ಸಿಂಹಾಸನಂ.

§ ಶಬ್ದಮಣಿದರ್ಪಣ. ೨೯೬ ನೆಯ ಸೂತ್ರದಲ್ಲಿ ‘ಪಾಣಿಯುದರಂ’ ‘ಪಾಣಿಯುದಾರಂ.’ ಎಂಬ ರೂಪಗಳಾಗುವದಿಲ್ಲವೆಂದು ಹೇಳಿದೆ.

೩೨೪. ಮುಂಡಾಸಿಯೆಂದುಂ, ಕೌಳಂಡೆಯೆಂದುಂ, ತೊಳಗು,

೩೨೫. ಡವಳಿಯೆಂದು ಕಾಳಂಜಿ.

೩೨೬. ರನ್ನವಾವುಗೆಯೆಂದು ರತ್ನಪಾದುಕೆ.

೩೨೭. ತಟ್ಟಿ, ಕೊಡೆ, ಮೇಘಡಂಬರಂ— ಈ ೩ ಆತಪತ್ರಂ.

೩೨೮. ಪಸಾಯ್ತನವೆಂದು ಉಡುಗೊಱೆ.

೩೨೯. ಓದಾಳಿಯೆಂದು ಪಾಠಕಂ.

೩೩೦. ಓಜನೆಂದಾಚಾರ್ಯಂ.

೩೩೧. ಮಾಣಿಕಚಟ್ಟನೆಂದು ರತ್ನಪರೀಕ್ಷಕಂ

೩೩೨. ಸ್ಥ್ಯದರೆಂದುಂ, ದಿವಿಷ್ಕಡರೆಂದುಂ, ಗನಹಧೆಂದುಂ, ನೇಱಿದರೆಂದುಂ— ಈ ೪ ಪಿರಿಯರ್ಗೆ ಪೆಸರ್.

೩೩೩. ನೆಲದಮ*ರ್ದುಣಿಸುಗಳೆಂದುಂ, ನೆಲನಮ*ರ್ದುಣಿಗಳೆಂದುಂ, ವಿಪ್ರರ್ಗೆ ಪೆಸರ್.

೩೩೪. ಅರಮಗನೆಂದರಸುಮಗಂ.

೩೩೫. ಸೊನ್ನವರದನೆಂದುಂ, ಪೊಂಬರದನೆಂದುಂ, ಚಿನ್ನವರದಂ.

೩೩೬. ಬಿತ್ತಗನೆಂದುಂ, ಬರ್ದುಗನೆಂದುಂ, ಪ್ರೌಢಂ.

೩೩೭. ಕಾಲುರಿಚನೆಂದುಂ, ಬೆಳ್ಳಕ್ಕರಿಗನೆಂದುಂ, ಗ್ರಾಮ್ಯಂ.

೩೩೮. ಬೊಂಬುಕನೆಂದುಂ, ಚೆಲ್ಲವತ್ತನೆಂದುಂ, ‘ನಂಬಿಸಿ ತಿಂಬವಂ.

೩೩೯. ಘೋಟಾಯಿಲನೆಂದು ರಾವುತಂ.

೩೪೦. ಜೋದನೆಂದು ಮಾನಂತಂ.

೩೪೧. ಪಚ್ಚಾಯಿಲನೆಂದು ಪಚ್ಚಡಿಸುವಾತಂ.

೩೪೨. ಝುಳಂಬಾಯ್ತನೆಂದು ಬಿಜ್ಜಣಿಗೆವಿಡಿವಾತಂ.

೩೪೩. ಕಲ್ಪಾಯ್ತನೆಂದು ವಿದ್ಯಾಶಿಕ್ಷಕಂ.

೩೪೪. ಅಜ್ಜುಳಾಯ್ತನೆಂದು ಪರಿಚಾರಕಂ.

೩೪೫. ಪಡೆವಳನೆಂದು ಸೇನಾಪತಿ.

೩೪೬. ಅಡಬಳನೆಂದು ಬಾಣಸಿಗಂ.

೩೪೭. ಪಡಿವಳನೆಂದು ಪ್ರತೀಹಾರಂ.

೩೪೮. ನೆಜ್ಜೆವಳನೆಂದು ಶಯ್ಯಾಗೃಹರಕ್ಷಕಂ.

೩೪೯. ಮಜ್ಜನವಳನೆಂದು ಮಜ್ಜನಂಬುಗಿಸುವಾತಂ.

೩೫೦. ಬೆಜ್ಜನೆಂದು ವೈದ್ಯಂ.

೩೫೧. ಕುಱುಂಬರೆಂದುಂ, ಆಡಂಗಾಯ್ತರೆಂದುಂ, ಕೊಟ್ಟವಳರ್.

೩೫೨. ನವಸಿಗನೆಂದು ಪರರಂ ಪಿಡಿವಾತಂ.

೩೫೩. ಎರೆವರೆಂದುಂ, ಬೇಡ್ಪರೆಂದುಂ, ಯಾಚಕರ್.

೩೫೪. ನೀರ್ಕುಟಿಕನೆಂದು ಅಂಬಿಗಂ.

೩೫೫. ಬಡಗನೆಂದು ಕೀಲಾಳ್.

೩೫೬. ಕೊಲ್ಲಟಿಗನೆಂದು ಡೊಂಬಂ.

೩೫೭. ಆಡಪವಳನೆಂದು ಹಡಪಿಗಂ.

೩೫೮. ಕೂಳ್ಬಾಣಿಗನೆಂದು ತಿನಾಳ್.

೩೫೯. ಸಬ್ಬವಕಾಱನೆಂದು ಪರಿಹಾಸಕಂ.

೩೬೦. ಸೋಂಬನೆಂದುಂ, ನಾಂಬನೆಂದುಂ, ಅಲಸುಗೆಕಾಱಂ.

೩೬೧ ತಕ್ಕನೆಂದು ಹಿತವಂ.

೩೬೨. ನಾಣಿಲಿಯೆಂದು ಲಜ್ಜಾಹೀನಂ.

೩೬೩. ಕಣ್ಣಿಲಿವೋಗನೆಂದು ಅಂಧಕಂ.

೩೬೪. ಕೂಟನೆಂದುಂ, ಕಿಱುಕುಳನೆಂದುಂ, ಅಲ್ಪಂ.

೩೬೫. ಗಾವಿಲನೆಂದು ಗಾಂಪಂ.

೩೬೬. ಎಗ್ಗನೆಂದು ಹೆಡ್ಡಂ.

೩೬೭. ಅರೆಬರೆಂದು ಕೆಲಂಬರ್.

೩೬೮. ಹದಿಬದೆಯೆಂದು ಪತಿವ್ರತೆ.

೩೬೯. ಅಯ್ದೆಯೆಂದು ಸುವಾಸಿನಿ.

೩೭೦. ಅಱುವೆಣ್ಣೆಂದು ಅಲ್ಪಸ್ತ್ರೀ.

೩೭೧. ಸಱುಮಿಂಡಿಯೆಂದು ಪ್ರಥಮಋತುವಾಗದಾಕೆ.

೩೭೨. § ತಱುಮಿಂಡಿಯೆಂದು ಪುಷ್ಪಿತೆಯಾದ ಕಾಂತೆ.

೩೭೩. ಪಿಱುಂಜವ್ವನೆಯೆಂದು ನವಯೌವನೆ.

§ ತುಱುಮಿಂಡಿ.

೧೭೪. ಚಿತ್ತಗವೆಣ್ಣೆಂದು ಪ್ರೌಢೆ.

೧೭೫. ಪಚ್ಚೆವೆಣ್ಣೆಂದು ಬಂಜೆ.

೧೭೬. ಚೆಲ್ಲಗಾರ್ತಿಯೆಂದು ಸರಸವತಿ.

೧೭೭. ಹೂಜೆಗಾರ್ತಿಯೆಂದು ಹುರುಡಿಸುವಾಕೆ.

೧೭೮. ಸಬ್ಬವಕಾರ್ತಿಯೆಂದು ಮೇಳಗಾರ್ತಿ.

೧೭೯. ಪಚ್ಚುಗೆಗಾರ್ತಿ, ಮಂತಣಗಾರ್ತಿ— ಈ ೨ ಏಕಾಂತದವಳ್.

೧೮೦. ಪಡಪುಗಾರ್ತಿಯೆಂದು ಗಳಸಾಳವೆಣ್.

೧೮೧. ಪದಪುಗಾರ್ತಿಯೆಂದುಂ, ಹೊನಹುಗಾರ್ತಿಯೆಂದುಂ, ಸಂರಂಭೆ

೧೮೨. ದೂದವಿಯೆಂದು ಕುಂಟಣಿ.

೧೮೩. ಕಿಱುದಂಗೆಯೆಂದು ಬಡವೃತ್ತಿದಳ್.

೧೮೪. ಹೆಟ್ಟುಗೆಯೆಂದು ವನಿತೆ.

೧೮೫. ಗೆಳತಿಯೆಂದುಂ, ಕೆಳದಿಯೆಂದುಂ, ಸಖಿ.

೧೮೬. ಸಿತಗೆ, ಜೋಡೆ, ಪಾಣ್ಬೆ, ಬೆದೆಗಾರ್ತಿ—ಈ ೪ ಜಾರೆಗೆ ಪೆಸರ್

೧೮೭. ಸಿತಗಂ, ಜೋಡಂ, ಪರಳಗಂ, ಪಾಣ್ಬಂ— ಈ ೪ ಜಾರಂಗೆ
5.

೧೮೮. ಅಚ್ಚುತರ್ಗಳೆಂದುಂ, ಗುಣಕಱುಗೊಂಡಳೆಂದುಂ, ಬಱಲ್ದಳೆಂ
, ಕೂರ್ತಳೆಂದುಂ, ಪ್ರೀತಿವಟ್ಟಳ್ಗೆ ಪೆಸರ್.

೧೮೯. ಕಾವಲಂ, ನಲ್ಲಂ, ಇನಿಯಂ, ಒಪಂ, ಮನದನ್ನಂ—ಈ ೫ ರಂಗೆ ಪೆಸರ್.

೧೯೦. ತಕ್ಕು, ಅಚ್ಚಿಱು, ಬೞಲ್, ಕಾವಲ್ಮೆ, ನಲ್ಮೆ, ಕೂರ್ಮೆ, ಎಱ ಒಪ್ಪು—ಈ ೮ ಸ್ನೇಹಕ್ಕೆ ಪೆಸರ್.

೧೯೧. ಒತಂ, ಒತಳ್, ಒತುವು—ಈ ೩ ಪುಂಸ್ತ್ರೀನಪುಂಸಕಲಿಂಗಂ
ಲ್ಲಿ ವರ್ತಿಪುವು.

೧೯೨. ಹಟ್ಟಿಗೆ, ದುಗುಲಂ, ಪಟ್ಟಣಿಗೆ, ಉಳ್ದುಡಿಗೆ—ಈ ೪ ವಸ
ಪೆಸರ್.

೩೯೩. ಅಂಚೆಯೆಂದು ಕಪ್ಪಟಂ.

೩೯೪. ಪಸುರವೆಂದು ಸಣ್ಣಂ.

೩೯೫. ಸೀಱಗೆಯೆಂದು ಉಡುಗೆ.

೩೯೬. ತೆರೆವೊಡೆಯೆಂದುಂ, ಸೋಗಿಲೆಂದುಂ, ಪಡಿಲ್.

೩೯೭. ಸೆಱಂಗೆಂದು ಚೇಲಾಂಚಲಂ.

೩೯೮. ಝುಳಂಬವೆಂದು ಮೇಲ್ಮುಸುಕು.

೩೯೯. ಸಾವಗಿಸುವುದೆಂದು ಸಸಿನೆವಾೞ್ಪುದು.

೪೦೦. ಸೃತೆಯೆಂದು ನೇಪಥ್ಯ.

೪೦೧. ಬಯ್ತುದೆಂದು ಬಚ್ಚಿಡುವುದು.

೪೦೨. ಕನ್ನವುರವೆಂದು ಕರ್ಣಪೂರಂ.

೪೦೩. ಬಣ್ಣವುರವೆಂದು ವರ್ಣಪೂರಂ.

೪೦೪. ಕಡೆಯವೆಂದುಂ, ಪೂವಲಿಯೆಂದುಂ, ರಂಗವಲಿ.

೪೦೫. ಬದ್ದವಣವೆಂದೊಸಗೆವಱ್.

೪೦೬. ಕಾವಣವೆಂದುಂ, ಪಂಪರೆಂದುಂ, ಚಪ್ಪರಂ.

೪೦೭. ಬಾಸಿಗವೆಂದು ಪೂವಾಲೆ.

೪೦೮. ಬಿರ್ದೆಂದು ಔತಣಂ.

೪೦೯. ಪಸದನಂ, ಪಚ್ಚಂ, ತೊಡಂ— ಈ ೩ ಆಭರಣಂ.

೪೧೦. ಆರವೆಂದು ಹಾರಂ.

೪೧೧. ¶ಜಾಳಯವೆಂದು ಮುತ್ತಿನ ಬೈತಲೆ.

೪೧೨. ತಿಂಗಳಿಗೆಯೆಂದು ತಿಲಕಂ.

೪೧೩. ಕಟಕೆಂದುಂ, ನೇವುರವೆಂದುಂ, ನೂಪುರಂ.

೪೧೪. ನೂಲ ತೊಂಗಲೆಂದು ಕಟಿಸೂತ್ರಂ.

೪೧೫. ‡ಚೊಲ್ಲೆಯವೆಂದು ತುಱುಬಿನ ಕೊನೆ.

೪೧೬. ನಿಱಿಗುರುಳ್, ಸೋವರ್ಪಡಿ, ಪೆಱನೊಸಲ್, ಕುಡುವುರ್ಬ ನಿಡುಗಣ್, ತೆಳ್ಗದಂಪು, ಇಂದುಟಿ, ಚೆಂಬಾಯ್, ಬಳ್ಳಡು, ನಱುಸುಯ್

¶ ಜಾಳಿಯ. ‡ ಚೊಲ್ಲಹ.

ನುಣ್ಗೊರಲ್, ನೆಲವೊಲೆ, ನಳತೋಳ್, ಕೆಂದಳಂ, ಸುಳ್ಳುಗುರ್, ಕೋಡಿವಾಸೆ, ಸುಟ್ಟುರ್ವೊರ್ಕುರ್ಚ್, ಬಟ್ಟದೊಡೆ, ಕಿಱುದೊಡೆ, ಪೊಲ್ಲಡಿ, ಮುಂಬರಿಯುಂ, ತಂಬೆಲರ್ ಎಳವಾವ್ರು, ಸೊರ್ಕುಗೋಗಿಲ್— ಇವು ಉಪಸರ್ಗಂ ಬೆರಸಿವ ಶಬ್ದಂಗಳ್.

೪೧೭. ಸುಸಿಲೆಂದು §ಸುರತಂ.

೪೧೮. ತಳ್ಕೆಯೆಂದಾಲಿಂಗನಂ.

೪೧೯. ಪೊಂಪುೞಿಯೆಂದು ಪುಳಕಂ.

೪೨೦. ಅರುಮೆಯೆಂದುಂ, ಅಲ್ಗೆಯೆಂದುಂ, ವಿರುದ್ಧ.

೪೨೧. ಸೊಕಮೆಂದುಂ, ಸೊಗಮೆಂದುಂ, ಸುಖಂ.

೪೨೨. †ಜೊಂಪಿಸಿತೆಂದು ಮೂರ್ಛೆ.

೪೨೩. ಬಗೆಯೆಂದು ಭಾವಂ.

೪೨೪. ಚೆಡಂಗೆಂದು ಮನೋಹರಂ.

೪೨೫. ಅಕ್ಷಿ, ಅಲಿ, ದಿಟ್ಟಿ— ಈ ೩ ನಯನಂ.

೪೨೬. ಚವಲಂಬಮೆಂದು ಕಣ್ಣವೆ.

೪೨೭. ¶ಕೊಡಂಕೆಯೆಂದು ಕಿವಿ.

೪೨೮. ಕೆಕ್ಕೆಯೆಂದು ಕೆನ್ನೆ.

೪೨೯. ಪೊಡೆಯೆಂದು ಬಸಿಱ್.

೪೩೦. ಜಘನಮೆಂದು ಕುಚಂ.

೪೩೧. ಪಕ್ಕಮೆಂದು ಬರಿ.

೪೩೨. ತಳಮೆಂದು ಕೈ.

೪೩೩. ನವಿರೆಂದು ಕೂಂದಲ್.

೪೩೪. ಪೊರ್ದುಗೆ, ಪೊರೆ, ಪಕ್ಕಂ, ಸನಿಹಂ, ಕೆಲಂ— ಈ ೫ ಸಮೀಪಂ.

೪೩೫. ಕಿತ್ತಡಿ, ಜತಿ, ಜೋಗಿ, ತಪಸಿ, ರಿಸಿ— ಈ ೫ ಋಷಿ.

೪೩೬. ಬೆಳ್ಳಡಿಯೆಂದು ಗೌರವಂ.

೪೩೭. ಗುಂಡಿಗೆಯೆಂದು ಜಲಪಾತ್ರಂ.

§ ಸುರತಂ. † ಜೊಂಪಿಸಿ. ¶ ಕೊಡಂ; ಕೊಡಂಕೆಯೆಂದು ಕಿವಿ.

೪೪೮. §ಕರ್ದ್ದಣಮೆಂದು ಜಡೆಗಟ್ಟು.

೪೪೯. ಜೋಗವಟ್ಟೆಯೆಂದು ಯೋಗಪಟ್ಟಿಕೆ.

೪೫೦. ಪೊಱ್ಗು, ತುೞಲ್, ಕುಂಬು, ಎಱಗು, ಬಾಗು, ಪೊಡೆವಡು, ಕಾಲ್ವಿಡಿ, ವಣಿ, ಮೆಯ್ಯಿಕ್ಕು— ಈ ೯ ನಮಸ್ಕಾರಂ.

೪೫೧. ಅಮ*ರ್ದುರ್ವೆಣ್ಣೆಂದು ಮೋಕ್ಷಾಂಗನೆ.

೪೫೨. ಕವಲಿಲ್ಲವನೆಂದಾತ್ಮಂ.

೪೫೩. ಸನ್ನಹವೆಂದು ಸನ್ನಾಹಂ.

೪೫೪. ಪುಚ್ಛಱಿಯೆಂದು ಕೇಡು.

೪೫೫. ಕಚ್ಛಱಿಯೆಂದು ಬಿರುದಿನ ಬಳ್.

೪೫೬. ಕಿಸುಗಣ್ಬು, ಕಿನಿಸು, ಕನಲ್, ¶ಕಾಯ್, ಮುಳಿಸು, ಮುನಿಸು, ಬರಸೊರಸು, ಸೆಣಸು— ಈ ೮ ಕೋಪಂ.

೪೫೭. ಕೇಣಂ, ಮಚ್ಛರಂ— ಈ ೨ ಮತ್ಸರಂ.

೪೫೮. †ಅಕ್ಕಜವೆಂದು ಅದಱ ಭೇದಂ.

೪೫೯. ಪರ್ಪರಿಕೆಯೆಂದು ಕರ್ಕಸಂ.

೪೬೦. ಪಿಱಿತಿನಿಯೆಂದು ಮರುಳ್.

೪೬೧. ಮೈಗರೆದನೆಂದು ಅಡಂಗಿದಂ.

೪೬೨. ಸೇದೆಯೆಂದು ಬಱಲ್ಕೆ.

೪೬೩. ಜೇವಣಂ, $ವಳಿಗೆ, ಕವಳಂ— ಈ ೩ ತುತ್ತಿಂಗೆ ಪೆಸರ್.

೪೬೪. ಪೋೞಗೆಯೆಂದು ಸ್ಫೋಟಕಂ.

೪೬೫. ಪೆಡಮೆಟ್ಟು, ಪೆಱಗು, ಪೆಱತು, ಪಿಂತಿಲ್— ಈ ೪ ಪಿಂಗಡೆಗೆ ಪೆಸರ್.

೪೬೬. ಅಟ್ಕಿಮೆಯೆಂದುಂ, ಅಱಂಬಿಯೆಂದು, ಅಜೀರ್ಣಂ.

೪೬೭. ಅಟ್ಕಿಜವೆಂದುಂ, ಕಱುಂಬೆಂದುಂ, ಅಸೂಯೆ.

೪೬೮. ಅನ್ನಯವೆಂದನ್ಯಾಯಂ.

೪೬೯. ‡ಸೊನ್ನಲಿಗೆಯೆಂದು ಒಟ್ಟಿಲ್.

---

§ ಕರ್ದ್ದಣ. ¶ ಕಾಯ್ಪು. † ಅಕ್ಕಟಾ. $ ಪೊ. ಗೆ. ‡ ಸನ್ನಲಿಗೆಯೆಂದುಬಟ್ಟಿತು.

೪೭೦. ಜನ್ನವೆಂದು ಯಜ್ಞಂ.

೪೭೧. ಜೆನ್ನವೆಂದು ಜೀರ್ಣಂ.

೪೭೨. ಬನ್ನವೆಂದು ಭಂಗಂ.

೪೭೩. ಈಱ್ದುದೆಂದುಂ, ಇಱುಕುಳಿಗೊಂಡುದೆಂದುಂ, ಎಱಕುಳಿಗೊಂಡುದೆಂದುಂ, ಕವರ್ತೆಗೊಂಡುದೆಂದುಂ, ಸೆಳೆದುಕೊಳ್ವುದು.

೪೭೪. †ಕೋಲ್ಲಿಯೆಂದು ವಕ್ರಂ.

೪೭೫. ಅಲ್ಲಣಿಗೆಯೆಂದು ಮೇಳಂ.

೪೭೬. ಕೊಲ್ಲಣಿಗೆಯೆಂದು ಎಡೆಯಾಡುವುದು.

೪೭೭. ಅಲಂಬೆಂದುಂ, ಕರ್ಚೆಂದುಂ, ಪ್ರಕ್ಷಾಳನಂ.

೪೭೮. ಕಿಲುಂಬೆಂದು ಕಾಳಿಕೆ.

೪೭೯. ¶ಸರವೆಂದುಂ, ಬೇಂಟೆಯೆಂದುಂ, ಸರವಿ.

೪೮೦. ತಱುಂಬೆಂದು ತಡೆವುದು.

೪೮೧. ಇಱುಂಬೆಂದು ಕರ್ಕಶತೆ.

೪೮೨. ಇಱುಂಪೆಯೆಂದು ಇಱುಪೆ.

೪೮೩. ಸಿಱುಂಬುಳೆಂದು ಸೂಸಾಟಂ.

೪೮೪. §ದೋಹಿಲೆಂದುಂ, ಗಾರಣಮೆಂದುಂ, ಪರಿವಡಿಯೆಂದುಂ, ಪ್ರಕಟಂ.

೪೮೫. ಎತ್ತುಂಗೋಲೆಂದು ಕೂರಂಬು.

೪೮೬. ಮಿಳ್ಳಿಸಿತೆಂದು ನೆಗೆದುದು.

೪೮೭. ಅಳುಕೆಯೆಂದುಂ, ದಳ್ಳಿಸಿತೆಂದುಂ, ಆವರಿಸಿದುದು

೪೮೮. ಬಗಡಿಸಿತೆಂದುಂ, ಓಗಡಿಸಿತೆಂದುಂ, ಓಕರಿಸಿದುದು.

೪೮೯. ದೇಸೆಯೆಂದುಂ, ಗಾಡಿಯೆಂದುಂ, ನಿರತೆಯೆಂದುಂ, ಸೊಬಗು.

೪೯೦. ಮುಸುಂಬೆಂದು ಮುಸುಡು.

೪೯೧. ಕಣ್ಣೊಂಜಲೆಂದು ದೃಷ್ಟಿದೋಷಂ.

---

† ಕೊಲ್ಲಿ. ¶ ಸರಡಂದುಂ, ಬೆರಡೆಂದುಂ, ಸರವಿ. § ಹರವಡಿ, ಗಾರುಣಂ, ದೋವಿಲ್—ಕಬ್ಬಿಗರಕೈಪಿಡಿ.

೪೯೨. †ಅಸವಸಮೆಂದವಶ್ಯಂ.

೪೯೩. ಬವಸೆಂದು ವ್ಯವಸಾಯಂ.

೪೯೪. ಚೀಳಡೆಂದು ಗೀಳಡುವುದು.

೪೯೫. ¶ಕುಕ್ಕಿಯೆಂದು ಕುಕ್ಷಿ.

೪೯೬. ಅಣ್ಪೆಂದು ಲೇಪನಕ್ರಿಯೆ.

೪೯೭. ಬಿಚ್ಚಟಸೆಂದುಂ, ಬಿತ್ತರಮೆಂದುಂ, ವಿಸ್ತಾರಂ.

೪೯೮. ಪುತ್ತಳಿಗೆಯೆಂದು ಪುತ್ತಳಿ.

೪೯೯. ಜಱುಚೆಂದು ವ್ಯರ್ಥಾಲಾಪಂ.

೫೦೦. ಗುಜ್ಜೆಂದು ಕಿಱಿದು.

೫೦೧. ಪಕ್ಕಲೆಂದುಂ, ಬಗರಗೆಯೆಂದುಂ, ‡ಬಕ್ಕಳೆ.

೫೦೨. ಪಕ್ಕಲೆಯೆಂದುಂ, ಬಗರಗೆಯೆಂದುಂ, ಬಱಂತೆಯೆಂದುಂ, ಬಜ್ಜರಂ.

೫೦೩. ಚಾವಳವೆಂದು ಚಾಪಲಂ; ಸಾಪತಾನ್ಯಮುಮಕ್ಕುಂ.

೫೦೪. ಇರ್ಪೆಂದು ದ್ರವಂ.

೫೦೫. ತಿಬ್ಬವೆಂದು ತೀವ್ರಂ.

೫೦೬. ಮುಕ್ಕುಳೆಂದು ದಂತಧಾವನಂ.

೫೦೭. ಕಿಣಿಯೆಂದು ದಂತಮಲಂ.

೫೦೮. ತೆಲ್ಲೈಸಿತೆಂದು ಮುಂಬ್ಯೆಸಿ ನಿಂದುದು.

೫೦೯. ಹೆಲ್ಲಣಿಯೆಂದುಂ, ನಿಟ್ಟುರಮೆಂದುಂ, ನಿಷ್ಠುರಂ

೫೧೦. ಸತಮೆಂದುಂ, ತಿರಮೆಂದುಂ, ಸ್ಥಿರಂ.

೫೧೧. ತಿಮಿತಮೆಂದು ಸ್ತಿಮಿತಂ.

೫೧೨. ಮಂತಣಮೆಂದೇಕಾಂತಂ.

೫೧೩. ಕೂನಮೆಂದು ಕುಬುಜು.

೫೧೪. ತೋರ್ಪೆಂದು ತೋರ್ಕೆ.

೫೧೫. ಮಗುಡಮೆಂದು ಮಕುಟಂ.

† ಅಸವಸಮೆಂದು ಅವಸರಂ. ಶ ದ. ¶ ಕುಕ್ಕೆಂದು ‡ ಪಕ್ಷಿ.

೫೧೬. ತಾಹೆಯೆಂದುಂ, ತಾಪೆಯೆಂದುಂ, ಕುಂಟಣಿವನೆ.

೫೧೭. † ಸಂತಣಯುವೆಂದು ಸಂಧಾನಂ.

೫೧೮. ‡ಎಪ್ಪುಚೆಂದುಂ, ತಿನ್ನವೆಂದುಂ, ಪತ್ತಳೆಯೆಂದುಂ, ಎಂಜಲ್.

೫೧೯. ತಱುವಾಯೆಂದುಂ, ಪೊೞಯೆಂದುಂ, ಕ್ರಮಂ.

೫೨೦. ಕೋಂಕೆಂದು ಗುರು.

೫೨೧ ಸೈತೆಂದು ಲಘು.

೫೨೨. ಪೆಂಜರಿಸಿತೆಂದು ಪಸರಿಸಿದುದು.

೫೨೩. ಪಡಾಂಚೆಂದು ವಂಚಿಸಿದುದು.

೫೨೪. ಬಂಚಕವೆಂದು ವಂಚಿಸಿದುದು.

೫೨೫. ಉಂಚವೆಂದು ಉದ್ಧಂ.

೫೨೬. ಪಂಚವೆಂದಪೂರ್ವಂ.

೫೨೭. ಅಪ್ಪುಕೆಯ್ಯೆಂದುಂ, ಇಂಬುಕೆಯ್ಯೆಂದುಂ, ಅಂಗೀಕಾರಂ.

೫೨೮. ಸೂಡಬಲಿಯೆಂದು ಶ್ಮಶಾನಂ.

೫೨೯. ಪೆಕ್ಕಣವೆಂದು ಪ್ರೇಕ್ಷಣಂ.

೫೩೦. ನಚ್ಚಣವೆಂದು ನರ್ತನಂ.

೫೩೧. ರಿಂಗಣವೆಂದು ಕುಣಿಹಂ.

೫೩೨. § ಕವ್ವರೆಯೆಂದು ಬಳಸಿ ಬರ್ಪುದು.

೫೩೩. ಎರ್ಕೆಯೆಂದು ಅರ್ಕಂ.

೫೩೪. ಮದುರ್ಗುಣಿಕೆಯೆಂದು $ ಉನ್ಮತ್ತಂ.

೫೩೫. ಅಮ್ಮಂಗೊಡಲಿಯೆಂದು ಹೆಗ್ಗಟ್ಟವತ್ತಿಗೆ.

೫೩೬. ತಂಬುಲವೆಂದುಂ, ವೀಳೆಯವೆಂದುಂ, ವೀಟಿಕೆ.

೫೩೭. ಎಕ್ಕವೆಂದುಂ, ಓರೆಂದುಂ, ಒಂದು.

೫೩೮. ಅವಳ್, ಪೊಣರ್, ಜುಗುವಂ, ಜುಗಂ—ಇವು ಎರಡಕ್ಕೆ ಪೆಸರ್.

೫೩೯. ಎಕ್ಕಸರಂ, ಒರ್ಬಡಿ, ಇರ್ಕೂಡೆ, ಎರಟ್ಟಾತು, ತಿವಳ್, ಮು

† ಸಂತವಣವೆಂದು ಸಂಧಾನಂ ; ಸನ್ದವಣೆ—ಕಬ್ಬಿಗರಕೈಪಿಡಿ. ‡ ಎಪ್ಪುಳ್ಳ.
§ ಕಾಲೆಂದು. $ ಉನ್ಮತ್ತಂ.

ಪ್ಪೊಱಲ್, ಚೌಸರಂ, ಅಯ್ಸಾಸಿರಂ, ಆಱಿ, ಅಱುದಿಂಗಳ್, ಪಱ್ಪರೆ, ಎೞ್ಸಸನಂ, ಎಣ್ದೆಸೆ, ಒಂಭಯ್ನೂಱು, ಪಯಿಂಛಾಸಿರಂ—ಇವು ಸಂಖ್ಯಾನಂಗಳ್.

೩೪೦. ಒರ್ವರ್, ಇರ್ವರ್, ಮೂವರ್, ಸಾಸಿರ್ವರ್, ಪಲರ್ವರ್—ಇವು ಎಣಿಸುವ ಸೊಱ್ಗೊಳ್ ವರ್ತಿಪ್ಪವು.

೩೪೧. ಅನಿತು, ಇನಿತು, ಎನಿತು—ಎಂಬಿವು ಪ್ರಮಾಣಸೂಚನಂಗಳ್.

೩೪೨. ನಿನತೆಂದುಂ, ನಿನತ್ತೆಂದುಂ, ನಿನ್ನದು.

೩೪೩. ತನತೆಂದುಂ, ತನತ್ತೆಂದುಂ, ತನ್ನದು.

೩೪೪. ಎನತೆಂದುಂ, ಎನತ್ತೆಂದುಂ ಎನ್ನದು.

೩೪೫. ಉನತೆಂದುಂ, ಉನತ್ತೆಂದುಂ, ಉನ್ನದು.

೩೪೬. ಇವಱ ಬಹುವಚನಕ್ಕೆ ಮಕಾರಮುಂ ಪತ್ತಿಸಿಕೊಳ್ವುದು

೩೪೭. ಅನ್ನೆಗಂ, ಅನ್ನೆವರಂ, ಅನ್ನೆವರೆಗಂ, ಇನ್ನೆಗಂ, ಇನ್ನೆವರಂ, ಇನ್ನೆವರೆಗಂ, ಉನ್ನೆಗಂ, ಉನ್ನೆವರಂ, ಉನ್ನೆವರೆಗಂ— ಇವು ಸೀಮಾಪ್ರಮಾಣಶಬ್ದಂಗಳ್.

೩೪೮. ಎತ್ತಣ್ತೆಂದು ಎತ್ತಣತೆಂಬರ್ಥಂ.

೩೪೯. ಆರ್ತೆಂದು ಆರದೆಂಬರ್ಥಂ.

೩೫೦. ಅಱ್ತುದೆಂದು ಅಱುತುದು.

೩೫೧. ತೊದಳೆಂದುಂ, ಸುಳ್ಳೆಂದುಂ, ಅನೃತಂ.

೩೫೨. *ಜಂಗಳವೆಂದು ಸಡಿಲ್ದುದು.

೩೫೩. ಒಳವೆಂದು ಉಂಟೆಂಬರ್ಥಂ.

೩೫೪. ಪಡಲಿಟ್ಟುದೆಂದು ಬಿಟ್ಟಿರ್ದುದು.

೩೫೫. ಕುಡುವೆಂದು ಕೊಂಕು.

೩೫೬. ಬಿಱುವೆಂದು ಬೆಟ್ಟಿತು.

೩೫೭. ಪುಡುಕೆಂದು ಅಱಿಸುವುದು.

೩೫೮. ಇಕ್ಕೆಂದು ಇಡುವುದು.

* ಸಂಗಳ್ ; ಜಂಗಳ್—ಕಬ್ಬಿಗರಕೈಪಿಡಿ.

೫೫೯. ನೆಱವೆಂದು ಕ್ಷಯಂ.

೫೬೦. ಎರ್ದೆ*ಯೆಂದುಂ, ಹೆದೆಯುಮೆಂದುಂ, ಹೃದಯಂ.

೫೬೧. §ಸರುಕೆಂದು ನೂನಾಟಂ.

೫೬೨. ತಿಱುಕಲ್ಲೆಂದು ಅಷ್ಟಾಕಲ್.

೫೬೩. ¶ಅಟ್ಟುಂಬೞಿಯೆಂದು ಬೞಿವೞಿಯೊಳ್ ಪೋಪುದು.

೫೬೪. ಅಡಂಗುಱುಂಬಾಟಮೆಂದು ಕಣ್ಣ ಮುಚ್ಚಾಟಂ.

೫೬೫. ಚಿಟ್ಟುಮುರಿಯೆಂದು ಪುಂಟಿ. (?)

೫೬೬. $ಕಳಲೆಂದು ಮರವಾಯ್ದು ಬಿನದಿಪುದು; ಗಂಡುಗಳೊಳ್ ಬಿನದಿಪಾಟಂ.

೫೬೭. ಪೞಿಮುೞಿಯೆಂದು ಬೆಗೆಲಂ ಪತ್ತುವಾಟಂ.

೫೬೮. ಬಟ್ಟೆಂದು ವೃತ್ತಿಪಿಂಡಸಂಘಟ್ಟನಂ.

೫೬೯. ಪೊಡೆಸೆಂಡೆಂದು ಅವಷ್ಕಾಲೆ.

೫೭೦. ನೀರಾಟಮೆಂದು ಜಲಕ್ರೀಡೆ.

೫೭೧. ಗೋಟ್ಟಿಯೆಂದು ಗೋಷ್ಠಿ.

೫೭೨. ನಿಟ್ಟೆಯೆಂದು ನಿಷ್ಠೆ.

೫೭೩. ದುಟ್ಟನೆಂದು ದುಷ್ಟಂ.

೫೭೪. ದಾಂಗುಡಿಯೆಂದು ದಾಂಟುಂಗುಡಿಯೆಂಬರ್.

೫೭೫. ಜುತ್ತಿಯೆಂದು ಯುಕ್ತಿ.

೫೭೬. ಗುಣ್ಪೆಂದು ಗಂಭೀರಂ.

೫೭೭. ಬಿಣ್ಪೆಂದುಂ, ತಿಣ್ಣಮೆಂದುಂ, ಭಾರಂ.

೫೭೮. ತಣ್ಪೆಂದು ಶೈತ್ಯಂ.

೫೭೯. ಕಣ್ಸೊಲ್ಲಮೆಂದು ಸರಸಾಲೋಕನಂ.

೫೮೦. ನುಣ್ಪೆಂದುಂ, ಜಗುೞೆಂದುಂ, ಜಾಱುವುದು.

೫೮೧. ಗೆಂಟೆಂದು ದೂರಂ.

---

§ ಸರುಂಕೆಳ್. ¶ ಅಟ್ಟುಂಬೞಿಯೆಂದು ಬೞಾಬೞಿ. $ ಕುೞಿಲೆಂದು.

೫೮೨. ಜಗುನೆಯೆಂದು ಯಮುನೆ.

೫೮೩. ತೊವರಿಯೆಂದು ತೊಗರಿ.

೫೮೪. ಪೊರೆಂದು ಪವಿತ್ರಭೇದಂ.

೫೮೫. ಪಾಜೆಂದುಂ, §ನಡೆನೂಡನೆಂದುಂ, ಪಾಷಾಣಂ.

೫೮೬. ತಗುಳೆಂದು ಸಂಧಾನಂ.

೫೮೭. ಪವಣೆಂದು ಪ್ರಮಾಣಂ.

೫೮೮. ಎಚ್ಚುಟ್ಟೆಂದುಂ, ತೂಳೆಂದುಂ, ಅರೆಯುಟ್ಟುವುದೆಂದುಂ, ಬೆನ್ನಟ್ಟುವುದು.

೫೮೯. ಬೆಂಗೆವಾಯ್ದುದೆಂದು ಬೆನ್ನೇಱಿದುದು.

೫೯೦. ಮಾರ್ಪೊಳೆಪೆಂದುಂ, ಪಡಿನೆಳಲೆಂದುಂ, ಪ್ರತಿಬಿಂಬಂ.

೫೯೧. ಕೋವಣಮೆಂದು ಕೌಪೀನಂ.

೫೯೨. ಜತ್ತಕಮೆಂದು ಕೈತವಂ.

೫೯೩. ಕಾಲೆಂದು ಕಾಲ್ವೆ.

೫೯೪. ಸೊರಮೆಂದು ಹೊನಲ್.

೫೯೫. †ಜಲ್ಲಱಿಯೆಂದು ಝಲ್ಲರಿ.

೫೯೬. ಕೞವೆಯೆಂದು ಶಾಲಿ.

೫೯೭. ಕದಿರೆಂದುಧಾನ್ಯದ ತೆನೆ ; ಕಿರಣಕ್ಕಮುಂಟು.

೫೯೮. ‡ಪಣ್ಣಿಕಮೆಂದು ತಿಲಕಂ.

೫೯೯. ಚೆಲಂಕೆಂದು ಕರವಿಮೋಚನಂ.

೬೦೦. δಅಸಕಳೆಯೆಂದು ಕೈಮಿಱಿದುದು.

೬೦೧. ಕೈಪಿಡಿಯೆಂದು ಕನ್ನಡಿ.

೬೦೨. ದೂಸರೆಂದು ತನ್ನ ದೆಸೆ.

೬೦೩. ಅಗ್ಗಳಮೆಂದಧಿಕಂ.

೬೦೪. ಕಿಮುಚ್ಚೆಂದು ಹಸ್ತವಿಮರ್ದನಂ.

೬೦೫. ಕುಪ್ಪಸಮೆಂದು ಕೂರ್ಪಾಸಂ.

§ ನಡೆಮಾಡೆಂದುಂ. ೫೮೮, ೫೮೯—ಸಮಾನಾರ್ಥಕವಾಗಿ ಒಂದು ಪ್ರತಿಯಲ್ಲಿದೆ.

† ಜಲ್ಲಳೆ. ‡ ಪಣ್ಣಿಕಮೆಂದು ತಿಲಂ ; ಆದರೆ ಶ. ದ. ಪಣ್ಣಿಕ = ಸಂವರಣೆ; ಕೆಯ್ತ. ಕ. ಕೈಪಿಡಿ. δ ಅಲಸಕರಿ.

೬೦೬. ಡೊಳ್ಳಾಸವೆಂದು ವ್ಯೈಶಿಕಂ.

೬೦೭. §ಕಡವರವೆಂದುಂ, ಬೈಕೆಯೆಂದುಂ, ನಿಧಾನಂ.

೬೦೮. †ವಣ್ಣವೆಂದು ಮೆಲ್ಲನೆ.

೬೦೯. ಅರವೆಯೆಂದು ಕೆಲವು.

೬೧೦. ನೆಟುಂದಿರಿದುದೆಂದು ದಣಿದುದು. (?)

೧೧೧. ಸಂದೆಯವೆಂದು ಸಂದೇಹಂ.

೬೧೨. ಬಳ್ವಳವೆಂದು ಪಿರಿದಾಗಿ ಬೆಳೆದುದು.

೬೧೩. ನಳನಳಕೆಯೆಂದು ಕೋಮಲಂ.

೬೧೪. ಮುಟ್ಟುವೆ, ಮಾಣಿಕಂ, ಮುಟ್ಟಲ್– ಈ ೩ ಸೂತಕಂ.

೬೧೫. ಬಟ್ಟಜೆಯೆಂದತಿಶಯಂ.

೬೧೬. ಪೆಟ್ಟೆಯೆಂದು ಹೆಂಟೆ.

೬೧೭. ಕೂಸೆಂದು ಕನ್ಯಕೆ.

೬೧೮. ಕನ್ನವಡವೆಂದು ಕನ್ನಡಿಗೋಡೆ.

೬೧೯. ತೇನತೇನವೆಂದು ಮೇಲೆಮೇಲೆಂಬರ್ಥಂ.

೬೨೦. ಬಾರಿಸೆಂದು ನಿವಾರಿಪುದು.

೬೨೧. ಸೂಳೆಂದು ಬಾರಿ.

೬೨೨. ಎಡಕೆಂದುಂ, ತವಿಲೆಂದುಂ, ದಾರಿದ್ರ್ಯಂ

೬೨೩. ಸಪ್ಪುರವೆಂದು ಸಣ್ಣಂ.

೬೨೪. ಕಲಿಯೆಂದು ಅಂಬಿಲಂ.

೬೨೫. ಮಿಟ್ಟೆಂದು § ಮಿಂಟೆ.

೬೨೬. ಅವ್ವಳಿಸಿತೆಂದು ಮೇಲ್ವಾಯ್ದುದು.

---

§ ಕಡವರವೆಂದು ಬಯಕೆ, ಕಡಾರಂ– ಉಕ್ಕೆವಮೇಕೆಯಕಿಱುದೊಡೆ । ಗಕ್ಕು ವಿನೆಂದಜ್ಜವಾಗಿ ನಣ್ಪಂ ಬಿಣ್ಪಂ ‖ ಮೊಕ್ಕಳಮೇವುದು ಮುರಲೊಳ್ । ನೆಕ್ಕೊರೆಗಳಪೊಟ್ಟೆ ಪೊಟ್ಟೆಯಾದಸುವಿನ್ನಂ ‖ ಎಂದು ವಿಧಾನಂ, ಎಂದು ಬಂದು ಪ್ರತಿಯಲ್ಲಿದೆ

† ೬೦೮, ೬೦೯– ಬಂದು ಪ್ರತಿಯಲ್ಲಿ– ವಣ್ಣನೆ, ಅರವೆ, ಕೆಲವು. ೫ ಮಿಣ್ಣೆ.

೬೨೭. †ಕಾತಳಿಯೆಂದು ಕಾತರಂ.

೬೨೮. ತಳವೆಳಗೆಂದು ನಿಟ್ಟೆಲಗು.

೬೨೯. ಲಾಕವೆಂದು ಲಾಕುಳಂ.

೬೩೦. §ಆದಲೆಯೆಂದುಂ, ಮುಮ್ಮೊಗವೆಂದುಂ, ಅಭಿಮುಖಂ

೬೩೧. ಕಾಕೆಂದು ದೇಶೀಯಂ.

೬೩೨. ತೋಳ್ದಲೆಯೆಂದುಂ, ಮುಯ್ಪೆಂದುಂ, ಭುಜಾಗ್ರಂ

೬೩೩. ಬೆಂಡೇಳ್ವುದೆಂದುಂ, ತೇಂಕೆಂದುಂ, ತೇಲ್ವುದು.

೬೩೪. ‡ಚಳಿಯುವೆಂದು ಸಿಂಪಿಸುವುದು; ಬಂದೆಡೆಗೆ ಪೋಪುದು ಮುಕ್ಕ್ಯಂ.

೬೩೫. ಮರುಕುಳಿಯೆಂದು ಮರಳ್ವುದು.

೬೩೬. ಪೆಂಕುಳಿಯೆಂದು ಮರುಳ್ತನಂ.

೬೩೭. ಬೆಳ್ಮಡೆಂದು ಮರುಳ್ಗೊಳ್ವುದು.

೬೩೮. ಉರವಣೆಯೆಂದುಂ, ನಿಪ್ಪಸರವೆಂದುಂ, ನಿಷ್ಠುರಂ.

೬೩೯. ಉಚ್ಚಳಿಪುದೆಂದುಂ, ಎಚ್ಚುಪಾಯ್ವುದೆಂದುಂ, ಪ್ರೋಚ್ಛ್ರೋಣ್ಕ್ರವುದು.

೬೪೦. ಕಾಟ್ಗಿಯ್ತವೆಂದು ದುಷ್ಕೃತ್ಯಂ.

೬೪೧. ತೊಡರೆಂದು ಬಿರುದಿನ ಹಾಹೆ.

೬೪೨. ಸಿಂಬೆಯೆಂದು ಸಿವುಡು.

೬೪೩. ತಿಗುರಿಯೆಂದು ಕುಲಾಲಚಕ್ರಂ.

೬೪೪. ಮೋದೆಂದುಂ, $$ ಮೂಜೆಂದುಂ, ಎಱಗಿದನೆಂದುಂ, ಎಱಗೆಂದುಂ, ಪೊಯ್ವುದು.

೬೪೫. ಕಿಸುರೆಂದು ಕಿತ್ತಡಂ.

೬೪೬. ಸಾರವಣೆಯೆಂದು ಸಾರ್ವುದು.

೬೪೭. ಝುಗಳಿಯೆಂದು ಕಂಸಾಳಂ.

೬೪೮. ಜಂಕೆಯೆಂದು ಜಂಗುವುದು.

೬೪೯. ನೆಱಲೆಂದುಂ, ಎಱಲೆಂದುಂ, $ ನೇಲ್ವುದು.

---

† ಕಾತಳ. § ಅಣಿದರಿ. ‡ ಚಳಿವು $$ ಮಾಡಿದನೆಂದುಂ $ ನೆಯ್ವುದು

೦. ನೆರೆನೆರೆದುದೆಂದು ಸಮಗ್ರಂ.

೧. § ತಳ್ಳೆಂದುಂ, ದಾವೆಂದುಂ, ಅಗ್ಗರಣೆಯೆಂದುಂ, ರಜ್ಜು.

೨. ಜನೆಯೆಂದು ಮೊಳೆವಲ್.

೬೫೩. ಕಟ್ಟಲೆಂದು ಕಾರ್.

೬೫೪. ಜಾಳಿಪುದೆಂದು ಸೋಂಕಿಪುದು.

೬೫೫. ವಿಸಟಂಬರಿಯೆಂದು ಯಥೇಷ್ಟಾಚಾರಂ.

೬೫೬. ಕೈಗಣ್ಮಿತೆಂದು ಅತಿಕ್ರಮಣಂ.

೬೫೭. ಪಿಸುಣೆಂದು ಕುತ್ಸಿತಂ.

೬೫೮. ತವಂಗವೆಂದು ತವಗಂ.

೬೫೯. ಅಕ್ಕುಳಿಸಿತೆಂದುಂ, ಮುಯ್ದುಗೆದುದೆಂದುಂ, ಬಳಸೋದುದೆಂದುಂ, ಪೆಡಂಮೆಟ್ಟಿತೆಂದುಂ, ಪಿಂತಣ್ಗೆ ವಂದುದೆಂದುಂ, ಬೆಂಗೊಟ್ಟುದೆಂದುಂ, ಜಾಱಿತೆಂದುಂ, ಪರಿಹುದೆಂದುಂ, ಜಗುಬ್ದುದೆಂದುಂ, ಬಿಲ್ಕೈಸಿತೆಂದುಂ, ಪೆಱಗೋದುದೆಂದುಂ, ನುಣ್ಚಿತೆಂದುಂ, ಪಾರಗೆಯ್ಯೆಂದುಂ—ಈ ೧೩ ಅಪಸರಣಕ್ಕೆ ಪೆಸರ್.

೬೬೦. ತೊನೆ, ಬಳೆ, ತೂಗು, ‡ ಸೆಡೆಪು, ಅಲ್ಲಾಡು, ನಡುಕಂ—ಈ ೬ ಕಂಪನಂ.

೬೬೧. ತೀಂಟವೆಂದುಂ, ತೀಡೆಂದುಂ, ತೀಂಡುವುದೆಂದುಂ, ಊದುವುದೆಂದುಂ—ವಾಯುಸಂಚಾರಂ.

೬೬೨. ಬಿಜ್ಜಣಿಗೆ, ಆಲವಟ್ಟಂ—ಈ ೨ ತಾಲವೃಂತಂ.

೬೬೩. ಅಸದಳವೆಂದು ಅಸಾಧ್ಯಂ.

೬೬೪. ಅವತೆಯೆಂದವಸ್ಥೆ.

೬೬೫. ಸಂತೆಯೆಂದು ಸಂಸ್ಥೆ.

೬೬೬. † ಪಱಿಯತ್ತವೆಂದು ಪ್ರತಿಹಸ್ತಂ.

೬೬೭. ಕೊಱ್ಚೆಂದು ಪುಡಿ.

೬೬೮. ತಿಣವೆಂದು ತೃಣಂ.

§ ತಳೆಯೆಂದುಂ ; ತಳ್ಳಂಕಂ. ‡ ಕೆಡಪು. † ಪಱಿಹತ್ತ.

೬೬೯. ಸಿಡುಂಬೆಂದು ಕುಜಂ.

೬೭೦. ಸೊರ್ಕುನೀರೆಂದು ಮದಜಲಂ.

೬೭೧. $ ಕೊರಡೆಂದು ಸ್ಥಾಣು.

೬೭೨. ತನಲಾಯಿಯೆಂದು ಕಪ್ಪುರವಳಿಕು.

೬೭೩. ಗತಕವೆಟ್ಟೆಂದು ಕೃತಕಾಚಲಂ.

೬೭೪. ಪೊರುಳ್ಮಾಣಿಯುವೆಂದು ಉಚಿತವಱಿತು ಕುಡುವ ವಸ್ತು.

೬೭೫. ಪಕ್ಕುವಣಿಯೆಂದುಂ, ಪಕ್ಕೂವಣಿಯೆಂದುಂ, ಬಂಧು.

೬೭೬. ಕೆಸಱಿಗೆಯೆಂದು ಬಚ್ಚಲ್.

ಕರ್ಣಾಟಕ ಶಬ್ದಸಾರಂ ಸಂಪೂರ್ಣಂ.

---

$ ಕೊರಟು.